ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಜನವರಿ 03, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 231 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಬಸಾಪುರದಲ್ಲಿ ವಿಜೃಂಭಣೆಯ ಮಹೇಶ್ವರ ಜಾತ್ರೆ

### ಪುಷ್ಕರಣಿಯಲ್ಲಿ ಪೂಜೆ, ಸಾವಿರಾರು ಜನರಿಂದ ಅನ್ನ, ಹಾಲು, ಸಕ್ಕರೆ, ಬಾಳೆಹಣ್ಣು ಪ್ರಸಾದ ಸೇವನೆ



ದಾವಣಗೆರೆ, ಜ.2- ತಾಲ್ಲೂಕಿನ ಬಸಾಪುರ ಗ್ರಾಮದಲ್ಲಿ ಮಹೇಶ್ವರ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಎರಡು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಪ್ರಥಮ ದಿನವಾದ ಮಂಗಳವಾರ ಅನ್ನ, ಹಾಲು, ಬಾಳೆಹಣ್ಣು, ಬೋರ ಸಕ್ಕರೆಯನ್ನು ಭಕ್ತರಿಗೆ ಪ್ರಸಾದವಾಗಿ ನೀಡಲಾಯಿತು. ಬೆಳಿಗ್ಗೆಯಿಂದ ರಾತ್ರಿ 8 ಗಂಟೆವರೆಗೂ ಪ್ರಸಾದ ಕಾರ್ಯ ನೆರವೇರಿತು.

ದಾವಣಗೆರೆ ಸೇರಿದಂತೆ, ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಅಕ್ಕಿ, ಹಾಲು, ಬಾಳೆ ಹಣ್ಣುಗಳೊಂದಿಗೆ ಆಗಮಿಸಿ, ದೇವರಿಗೆ ಪೂಜೆ ಸಲ್ಲಿಸಿ, ಪ್ರಸಾದ ಸೇವಿಸಿದರೆ, ಗ್ರಾಮದ ಚಿಕ್ಕ ಮಕ್ಕಳು, ಯುವಕರು ಇಳಿ ವಯಸ್ಸಿನ ಹಿರಿಯರು ಉತ್ಸಾಹದಿಂದ ಪಾಲ್ಗೊಂಡು ಪ್ರಸಾದ ಬಡಿಸುವಲ್ಲಿ ಮಗ್ನರಾಗಿದ್ದರು.



ಬೆಳಿಗ್ಗೆ 7 ಗಂಟೆಗೆ ಮಹೇಶ್ವರ ಸ್ವಾಮಿಯ ಗದ್ದುಗೆ ಸಮೀಪ ಇರುವ ಪುಷ್ಕರಣಿಯಲ್ಲಿ ಸ್ವಾಮೀಜಿ ಒಬ್ಬರು ಮುಳುಗಿ ಮೃತ್ತಿಕೆಯನ್ನು ತಂದರು. ಅದನ್ನು 2 ಬಾಳೆಹಣ್ಣಿನ ಚಿಪ್ಪಿನಲ್ಲಿಟ್ಟು ಪೂಜಿಸ ಲಾಯಿತು. ನಂತರ ಪುಷ್ಕರಣೆಗೆ ವಿಸರ್ಜಿಸ ಲಾಯಿತು. ಒಂದು ಚಿಪ್ಪು ಮುಳುಗಿ, ಮತ್ತೊಂದು ಚಿಪ್ಪ ತೇಲಿತು. ಇದರಿಂದಾಗಿ ಸಾಧಾರಣ ಫಲ ಎಂದು ಗ್ರಾಮಸ್ಥರು ಹೇಳಿದರು.

ಅಂದ ಹಾಗೆ ಈ ಪುಷ್ಕರಣೆಯಲ್ಲಿ ವಿಸರ್ಜಿಸಿದ ಎರಡೂ ಚಿಪ್ಪುಗಳು ಮುಳುಗಿದರೆ ಗಂಡಾಂತರವೆಂದೂ, ಎರಡೂ ತೇಲಿದರೆ ತುಂಬಾ ಒಳ್ಳೆಯದೆಂದೂ, ಒಂದು (4ನೇ ಪುಟಕ್ಕೆ)

## ಜೆಎನ್.1 ಸೋಂಕು ಮಾರಣಾಂತಿಕವಲ್ಲ

### ಮುನ್ನೆಚ್ಚರಿಕೆ ಅತ್ಯಗತ್ಯ: ಸಚಿವ ಶರಣ ಪ್ರಕಾಶ್ ಪಾಟೀಲ್

ಬೆಂಗಳೂರು, ಜ. 2 - ಕೋವಿಡ್ ರೂಪಾಂತರಿ ತಳಿ ಜೆಎನ್.1 ಸೋಂಕು ತುಂಬಾ ವೇಗವಾಗಿ ಹರಡುವ ಸಾಧ್ಯತೆ ಇದೆಯಾದರೂ, ಇದು ಪ್ರಾಣಾಂತಿಕವಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆತಂಕಪಡುವ ಅವಶ್ಯಕತೆ ಇಲ್ಲದಿದ್ದರೂ ಮುನ್ನೆಚ್ಚರಿಕೆ ಅಗತ್ಯ ಎಂದಿದ್ದಾರೆ.

ಗುಂಪು ಸೇರುವ ಮತ್ತು ಸಾರ್ವಜನಿಕ ಸಮಾರಂಭದ ಕಡೆಗಳಲ್ಲಿ ಮಾಸ್ಕ್ ಧರಿಸಿ. ಆದರೆ ಇದನ್ನು ಕಡ್ಡಾಯ ಮಾಡುತ್ತಿಲ್ಲ, ಮುಂಜಾಗ್ರತೆಯಾಗಿ ಸರ್ಕಾರ ಸಲಹೆ ನೀಡುತ್ತಿದೆ.

ರೂಪಾಂತರಿ ತಳಿಯಿಂದ ಯಾರೂ ಪ್ರಾಣ ಕಳೆದುಕೊಂಡಿಲ್ಲ, ಆದರೆ ಅನ್ಯ ಕಾಯಿಲೆಯಿಂದ ಬಳಲುತ್ತಿದ್ದವರು ಸೋಂಕು ತಗುಲಿ ಮೃತಪಟ್ಟಿದ್ದಾರೆ ಎಂದು ಸ್ಪಷ್ಟಪಡಿಸಿದರು.

ರೂಪಾಂತರಿ ಜೆ.ಎನ್-1 ಸೋಂಕು ಕಾಣಿಸಿಕೊಂಡಿದ್ದರೂ ಇದು ಮನುಷ್ಯರ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರುವ ಸಾಧ್ಯತೆ ಇಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ತಜ್ಞರೇ ಹೇಳಿದ್ದಾರೆ. ಆದರೂ ಇದರ ಬಗ್ಗೆ ಮೈ ಮರೆಯದೇ, ಕೆಲವು ಮುಂಜಾಗ್ರತಾ ಕ್ರಮಗಳನ್ನು ತೆಗೆದು ಕೊಳ್ಳಬೇಕು. ಪ್ರಸ್ತುತ ಕೇಂದ್ರ ಸರ್ಕಾರ ರಾಜ್ಯಕ್ಕೆ 30 ಸಾವಿರ ಕೋವಿಡ್ ವ್ಯಾಕ್ಸಿನ್ ಕಳುಹಿಸಿಕೊಟ್ಟಿದೆ, ವ್ಯಾಕ್ಸಿನ್ ಕೊರತೆಯಾಗದಂತೆ ಎಲ್ಲ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದ್ದೇವೆ.

ರಾಜ್ಯದಲ್ಲಿ ಪ್ರತಿಯೊಬ್ಬರಿಗೂ ಕೋವಿಡ್ ಲಸಿಕೆ ನೀಡುವ ಅಗತ್ಯವಿಲ್ಲ, 60 ವರ್ಷ ಹಾಗೂ ದೀರ್ಘ ವ್ಯಾಧಿಯಿಂದ ಬಳಲುತ್ತಿರುವವರು ನಾಳೆಯಿಂದಲೇ (ಬುಧವಾರ) ಜಿಲ್ಲಾಸ್ಪತ್ರೆಗಳಿಗೆ ತೆರಳಿ ಕೋವಿಡ್ ವಾಕ್ಸಿನ್ ತೆಗೆದುಕೊಳ್ಳಬಹುದು ಎಂದು ಹೇಳಿದರು.

ಕೇರಳದಲ್ಲಿ ಕಾಣಿಸಿಕೊಂಡ ರೂಪಾಂತರ ಜೆಎನ್-1 ಸೋಂಕು (4ನೇ ಪುಟಕ್ಕೆ)

## ಕಚ್ಚಾ ತೈಲದ ಲಾಭದ ಮೇಲಿನ ತೆರಿಗೆ ಹೆಚ್ಚಳ

ನವದೆಹಲಿ, ಜ. 2 - ಕಚ್ಚಾ ತೈಲಕ್ಕೆ ವಿಧಿಸಲಾಗುವ ಅನಿರೀಕ್ಷಿತ ಲಾಭದ ತೆರಿಗೆಯನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. ಇದೇ ವೇಳೆ ಡೀಸೆಲ್ ಹಾಗೂ ವೈಮಾನಿಕ ಇಂಧನದ ಮೇಲಿನ ತೆರಿಗೆಯನ್ನು ಇಳಿಸಲಾಗಿದೆ.

ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ಟನ್‌ಗೆ 2,300 ರೂ.ಗಳಿಗೆ ಹೆಚ್ಚಿಸಲಾಗಿದೆ. ಪ್ರಸಕ್ತ ತೆರಿಗೆ 1,300 ರೂ. ಆಗಿದೆ.

ಡೀಸೆಲ್ ಮೇಲೆ ಪ್ರತಿ ಲೀಟರ್‌ಗೆ ಇದ್ದ 50 ಪೈಸೆ ತೆರಿಗೆಯನ್ನು ರದ್ದುಗೊಳಿಸಲಾಗಿದೆ. ವೈಮಾನಿಕ ಇಂಧನದ ಮೇಲಿದ್ದ ಲೀಟರ್‌ಗೆ 1 ರೂ. ತೆರಿಗೆಯನ್ನೂ ರದ್ದುಗೊಳಿಸಲಾಗಿದೆ.

## ಅಪಘಾತ ವೇಳೆ ದೂರವಾಣಿಯಲ್ಲಿ ಮಾಹಿತಿ ನೀಡಿದರೆ ಕ್ರಮವಿಲ್ಲ

### ನೂತನ ಕಾಯ್ದೆಯ ಬಗ್ಗೆ ಅಧಿಕಾರಿಗಳ ಸ್ಪಷ್ಟನೆ

ನವದೆಹಲಿ, ಜ. 2 - ಆಕಸ್ಮಿಕವಾಗಿ ವ್ಯಕ್ತಿಯೊಬ್ಬರಿಗೆ ವಾಹನ ಬಡಿದ ಸಂದರ್ಭದಲ್ಲಿ ಚಾಲಕರು ಪೊಲೀಸರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದರೆ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಪಘಾತ ನಡೆದ ಸಂದರ್ಭದಲ್ಲಿ ಜನರಿಂದ ಹಲ್ಲೆಯಾಗಲಿದೆ ಎಂಬ ಭೀತಿ ಇದ್ದಾಗ ಚಾಲಕರು ಹತ್ತಿರದ ಪೊಲೀಸ್ ಠಾಣೆಗೆ ತೆರಳಿ ಮಾಹಿತಿ ನೀಡಬಹುದು. ಇಲ್ಲವೇ ಪೊಲೀಸರಿಗೆ ಕರೆ ಮಾಡ ಬಹುದು. ಇಲ್ಲವೇ ಸಹಾಯವಾಣಿ ಸಂಖ್ಯೆಯಾದ 108ಕ್ಕೆ ಕರೆ ಮಾಡಿ ಅಪಘಾತದ ಮಾಹಿತಿ ನೀಡಬಹುದು ಎಂದು ಅಧಿಕಾರಿ ಹೇಳಿದ್ದಾರೆ.

ನೂತನ ಭಾರತೀಯ ನ್ಯಾಯ ಸಂಹಿತೆ ಕಾಯ್ದೆಯ ಅನ್ವಯ, ಈ ರೀತಿ ಮಾಹಿತಿ ನೀಡಿದ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಿಲ್ಲ (4ನೇ ಪುಟಕ್ಕೆ)

## ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಕರೆಯಲು ಆಗ್ರಹ



ದಾವಣಗೆರೆ, ಜ.2- ಜಿಲ್ಲಾ ಉಸ್ತುವಾರಿ ಸಚಿವರು ಶೀಘ್ರವೇ ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಕರೆದು ಜಿಲ್ಲೆಯ ಅಚ್ಚು ಕಟ್ಟು ಪ್ರದೇಶಗಳಿಗೆ 72 ದಿನ ನೀರು ಹರಿಸುವ ವೇಳಾಪಟ್ಟಿ ನಿರ್ಣಯಿಸಿ ಪ್ರಕಟಿಸಬೇಕು ಎಂದು ಹರಿಹರ ಶಾಸಕ ಬಿ.ಪಿ. ಹರೀಶ್ ಆಗ್ರಹಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಏಳು ತಿಂಗಳಿನಿಂದ ಭದ್ರಾ ಸಲಹಾ ಸಮಿತಿ ಸಭೆ ಕರೆದಿಲ್ಲ. ಸಮಿತಿಗೆ ಶಾಸಕರು ಸದಸ್ಯರಾಗಿರುತ್ತಾರೆ. ಆದ್ದರಿಂದ ಆಯಾ ಭಾಗದ ಶಾಸಕರನ್ನು ಕರೆದು ಆರೋಗ್ಯಕರ ಚರ್ಚೆ ಮಾಡಬಹುದಿತ್ತು. ಆದರೆ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಬೇಜವಾಬ್ದಾರಿ ವರ್ತನೆಯಿಂದ ರೈತರಿಗೆ ದ್ರೋಹ ಮಾಡುತ್ತಿದ್ದಾರೆ ಎಂದು ದೂರಿದರು.

ದಾವಣಗೆರೆ ಜಿಲ್ಲೆಯಲ್ಲಿಯೇ ಹೆಚ್ಚು ಅಚ್ಚುಕಟ್ಟು ಪ್ರದೇಶವಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ (4ನೇ ಪುಟಕ್ಕೆ)

## ತೋಟದ ಬೆಳೆಗಳಿಗೆ ನೀರು ಹರಿಸುವ ಹಿನ್ನೆಲೆ 6 ಕ್ಕೆ ಭದ್ರಾ ಕಾಡಾ ಸಭೆ

ಶಿವಮೊಗ್ಗ, ಜ.02- ಭದ್ರಾ ಅಚ್ಚುಕಟ್ಟಿನ ತೋಟದ ಬೆಳೆಗಳಿಗೆ ಭದ್ರಾ ಜಲಾಶಯದಿಂದ ಬಲದಂಡೆ ಮತ್ತು ಎಡದಂಡೆ ನಾಲೆಗಳಿಗೆ ನೀರು ಹರಿಸುವ ಸಂಬಂಧ ಚರ್ಚಿಸಲು ಇದೇ ದಿನಾಂಕ 6 ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಮಲವಗೊಪ್ಪದಲ್ಲಿರುವ ಭದ್ರಾ ಕಾಡಾ ಕಛೇರಿಯಲ್ಲಿ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆಯನ್ನು ಕರೆಯಲಾಗಿದೆ.

ಭದ್ರಾ ಕಾಡಾ ಅಧ್ಯಕ್ಷರೂ ಆದ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ (4ನೇ ಪುಟಕ್ಕೆ)

## ಕಠಿಣ ಕಾಯ್ದೆಯ ಮುಷ್ಕರ ವಾಪಸ್ ಪಡೆದ ಲಾರಿ ಚಾಲಕರು

ನವದೆಹಲಿ, ಜ. 2 – ಗುದ್ದೋಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷೆ ಕಠಿಣಗೊಳಿಸಿರುವುದನ್ನು ವಿರೋಧಿಸಿ ಲಾರಿ ಚಾಲಕರು ನಡೆಸುತ್ತಿದ್ದ ಮುಷ್ಕರವನ್ನು ವಾಪಸ್ ಪಡೆಯಲಾಗಿದೆ.

ಅಪಘಾತದ ಸಂದರ್ಭದಲ್ಲಿ ಪೊಲೀಸರಿಗೆ ಮಾಹಿತಿ ನೀಡದೇ ಓಡಿ ಹೋಗುವವರಿಗೆ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಭಾರತೀಯ ನ್ಯಾಯ ಸಂಹಿತೆಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕಠಿಣ ಕಾಯ್ದೆಯನ್ನು ವಿರೋಧಿಸಿ ಸೋಮವಾರದಿಂದ ಮೂರು ದಿನಗಳ ಮುಷ್ಕರ ಆರಂಭಿಸಲಾಗಿತ್ತು. ಎರಡನೇ ದಿನದಂದು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲ ಅವರು ಲಾರಿ ಚಾಲಕರ ಸಂಘಟನೆಗಳ ಜೊತೆ ಮಾತುಕತೆ ನಡೆಸಿದ್ದರು. ಚರ್ಚೆಯ ನಂತರ ಮಾತನಾಡಿರುವ ಆಲ್ ಇಡಿಯಾ ಮೋಟರ್ (4ನೇ ಪುಟಕ್ಕೆ)

## ಸಿದ್ದರಾಮಯ್ಯ ಅಕ್ಕಿಗೆ ಅರಿಶಿಣ ಹಚ್ಚಿ ಮಂತ್ರಾಕ್ಷತೆ ಎಂದು ಹಂಚುತ್ತಿದ್ದಾರೆ



ದಾವಣಗೆರೆ, ಜ. 2 - ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೇಬರು ಕೊಟ್ಟಿರುವ ಅಕ್ಕಿಗೆ ಅರಿಶಿಣ ಹಚ್ಚಿ ಮಂತ್ರಾಕ್ಷತೆ ಎಂದು ರಾಜ್ಯಾದ್ಯಂತ ಹಂಚಲಾಗುತ್ತಿದೆ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ವ್ಯಂಗ್ಯವಾಡಿದ್ದಾರೆ.

ರಾಮ ಮಂದಿರದ ಉದ್ಘಾಟನೆಯ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಪೂಜಿಸಲಾದ ಅಕ್ಷತೆಯನ್ನು ದೇಶಾದ್ಯಂತ ವಿತರಿಸಲಾಗುತ್ತಿದೆ. ಶ್ರೀ ರಾಮ ಜನ್ಮಭೂಮಿ ಟ್ರಸ್ಟ್‌ನ ಈ ಅಕ್ಷತೆಯನ್ನು ವಿಶ್ವ ಹಿಂದೂ ಪರಿಷತ್ ಮೂಲಕ ವಿತರಣೆ ಮಾಡುತ್ತಿದೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿದ ಬಸವಂತಪ್ಪ, ರಾಮ ಮಂದಿರವನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು ಎಂದಿದ್ದಾರೆ.

ರಾಮ ಮಂದಿರ ಉದ್ಘಾಟನೆಯಾದ ಮೇಲೆ ನಾವೂ ಹೋಗಿ ಕೈ ಮುಗಿದು ಬರುತ್ತೇವೆ. ರಾಮ, ಸೀತೆ, ಲಕ್ಷ್ಮಣ, ಹನುಮಂತರನ್ನು ಯಾವುದೇ ಪಕ್ಷವಾದರೂ ರಾಜಕೀಯಕ್ಕೆ ಬಳಸಬಾರದು ಎಂದರು. (3ನೇ ಪುಟಕ್ಕೆ)

## ಹೆಚ್. ಕಲಪನಹಳ್ಳಿ ಸಣ್ಣ ಶಿವಪ್ಪರ ಸುಶೀಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ಗ್ರಾಮದ ವಾಸಿ ಸಣ್ಣ ಶಿವಪ್ಪರ ಕೆ.ಎಸ್. ಬಸಪ್ಪ ನಿವೃತ್ತ ಶಿಕ್ಷಕರು, ಇವರ ಧರ್ಮಪತ್ನಿ **ಸುಶೀಲಮ್ಮ** ಇವರು ದಿ.: 02.01.2024ರ ಮಂಗಳವಾರ ಬೆಳಿಗ್ಗೆ 9.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 88 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. : 03.01.2024ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮವಾದ ಹೆಚ್. ಕಲಪನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : 88672 50798

## ಗಂಡನ ಬದಲು ಮಕ್ಕಳಿಗೆ ಕೌಟುಂಬಿಕ ಪಿಂಚಣಿ ನೀಡಲು ಅವಕಾಶ

ನವದೆಹಲಿ, ಜ. 2 - ವೈವಾಹಿಕ ಕಲಹದ ಸಂದರ್ಭದಲ್ಲಿ ಮಹಿಳಾ ಉದ್ಯೋಗಿಗಳು ಗಂಡನ ಬದಲು ತಮ್ಮ ಮಕ್ಕಳನ್ನು ಕೌಟುಂಬಿಕ ಪಿಂಚಣಿಗೆ ಆಯ್ಕೆ ಮಾಡಬಹುದು ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರಿ ನೌಕರರ ನಿಧನ ಇಲ್ಲವೇ ನಿವೃತ್ತಿಯ ನಂತರ ಕೌಟುಂಬಿಕ ಪಿಂಚಣಿ ನೀಡಲಾಗುತ್ತದೆ. ಸಾವಿನ ಸಂದರ್ಭದಲ್ಲಿ ಸಂಗಾತಿಗೆ (4ನೇ ಪುಟಕ್ಕೆ)

## ಬ್ರಿಕ್ಸ್‌ಗೆ 5 ದೇಶಗಳ ಸೇರ್ಪಡೆ

ನವದೆಹಲಿ, ಜ. 2 – ಐದು ದೇಶಗಳ ಸಮೂಹವಾದ ಬ್ರಿಕ್ಸ್‌ಗೆ ಈಗ ಇನ್ನೂ ಐದು ದೇಶಗಳನ್ನು ಸೇರ್ಪಡೆ ಮಾಡಲಾಗಿದೆ. ಈ ಒಕ್ಕೂಟವನ್ನು ಮತ್ತಷ್ಟು ವಿಸ್ತರಿಸಲಾಗುವುದು ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಹೇಳಿದ್ದಾರೆ.


ಪ್ರಸಕ್ತ ಬ್ರಿಕ್ಸ್ ಒಕ್ಕೂಟದಲ್ಲಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಹಾಗೂ ದಕ್ಷಿಣ ಆಫ್ರಿಕಾಗಳಿವೆ. ಈ ಒಕ್ಕೂಟಕ್ಕೆ ಈಗ ಈಜಿಪ್ಟ್, ಇಥಿಯೋಪಿಯ, ಇರಾನ್, ಸೌದಿ ಅರೇಬಿಯಾ ಹಾಗೂ ಯು.ಎ.ಇ.ಗಳನ್ನು ಸೇರ್ಪಡೆ ಮಾಡಲಾಗಿದೆ.

Narayana Health
Take Care
ಶಿವಮೊಗ್ಗದ ಖ್ಯಾತ ಸರ್ಜಿಕಲ್ ಗ್ಯಾಸ್ಟ್ರೋ ತಜ್ಞ ವೈದ್ಯರು ಈಗ ನಿಮ್ಮ ದಾವಣಗೆರೆಯಲ್ಲಿ
ಸಾಮಾನ್ಯ ಲಕ್ಷಣಗಳು
ಗ್ಯಾಸ್ಟ್ರಿಕ್ ಸಮಸ್ಯೆ | ಹೊಟ್ಟೆ ನೋವು | ಅಪೆಂಡಿಕ್ಸ್ | ಪಿತ್ತಕೋಶದಲ್ಲಿ ಕಲ್ಲು | ಹರ್ನಿಯ
ಮೂಲವ್ಯಾಧಿ | ಫಿಸ್ತೂಲ | ಮಲಬದ್ಧತೆ ಲ್ಯಾಪ್ರೊಸ್ಕೋಪಿಕ್ ಶಸ್ತ್ರ ಚಿಕಿತ್ಸೆ
ಡಾ|| ಸತೀಶ್ ಕುಮಾರ್ ಬಿ.ಎಂ.
ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ & ಲಿವರ್ ಟ್ರಾನ್ಸ್‌ಪ್ಲಾಂಟ್



ಜನವರಿ 05 ರಂದು (ಪ್ರತಿ ತಿಂಗಳ 1ನೇ ಶುಕ್ರವಾರ) | ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 2:00 ರವರೆಗೆ
ಯುನಿಟಿ ಹೆಲ್ತ್ ಸೆಂಟರ್, ಸೈಂಟ್ ಪಾಲ್ಸ್ ಕಾನ್ವೆಂಟ್ ರಸ್ತೆ, 5ನೇ ತಿರುವು, ದಾವಣಗೆರೆ
ಹೆಚ್ಚಿನ ಮಾಹಿತಿಗಾಗಿ 88844 31388, 73494 48215
ಸಹ್ಯಾದ್ರಿ ನಾರಾಯಣ ಆಸ್ಪತ್ರೆ, ಹರಕೆರೆ, ಶಿವಮೊಗ್ಗ

|| ಶ್ರೀ ಅಂಬಾಭವಾನಿ ಪ್ರಸನ್ನ ||
ವಿವಾಹ ಮಹೋತ್ಸವ ಆಮಂತ್ರಣ
ಶ್ರೀಮತಿ ಸುಧಾಬಾಯಿ ಮತ್ತು ಶ್ರೀ ಯಶವಂತರಾವ್ ಜಾಧವ್
ಶ್ರೀ ಡಿ. ದೇವರಾಜ ಅರಸು ಬಡಾವಣೆ, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.



ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನೃಪ ಶಾಲಿವಾಹನ ಶಕೆ 1945ನೇ ಶ್ರೀ ಶೋಭಕೃತ ನಾಮ ಸಂವತ್ಸರೇ ಹೇಮಂತ ಋತು ಮಾರ್ಗಶಿರ ಮಾಸ ಕೃಷ್ಣಪಕ್ಷ ಅಷ್ಟಮಿ ತಿಥಿ ದಿನಾಂಕ 04-01-2024 ನೇ ಗುರುವಾರ ಬೆಳಗ್ಗೆ 9-00 ರಿಂದ 10-30 ರವರೆಗೆ ಸಲ್ಲುವ ಕುಂಭ ಲಗ್ನದ ಶುಭ ಮುಹೂರ್ತದಲ್ಲಿ
ನಮ್ಮ ಸುಪುತ್ರ
ಚಿ|| ರಾ|| ರಾಕೇಶ ಜಾಧವ್
ಮಹಾನಗರ ಪಾಲಿಕೆ ಸದಸ್ಯರು
ಚಿ|| ಕುಂ|| ಸೌ|| ಯಶೋದ
(ಶ್ರೀಮತಿ ಮಾಲಾಬಾಯಿ ಮತ್ತು ದಿ|| ರುದ್ರಪ್ಪ ಪವಾರ ತಡಕೋಡ, ಬೆಳಗಾವಿ ಇವರ ಜೇಷ್ಠ ಪುತ್ರಿ)
ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿದ್ದಾರೆ. ತಾವುಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ,

ಆರತಕ್ಷತೆ :
03-01-2024ನೇ ಬುಧವಾರ
ಸಂಜೆ 7-30 ರಿಂದ

ವಿವಾಹ ಮುಹೂರ್ತ :
04-01-2024ನೇ ಗುರುವಾರ
ಬೆಳಿಗ್ಗೆ 9-00 ರಿಂದ 10-30 ರವರೆಗೆ

ವಿವಾಹ ಸ್ಥಳ :
ಬಾಪೂಜಿ ಬ್ಯಾಂಕ್ ಸಮುದಾಯ ಭವನ
ಶಾಮನೂರು ರಸ್ತೆ, ದಾವಣಗೆರೆ.

ವಿಶೇಷ ಆಹ್ವಾನಿತರು :



ಶ್ರೀ ಸಂತೋಷ್ ಲಾಡ್ – ಕಾರ್ಮಿಕ ಸಚಿವರು
ಶ್ರೀ ಬಿ.ವೈ. ವಿಜಯೇಂದ್ರ – ಬಿಜೆಪಿ ರಾಜ್ಯಾಧ್ಯಕ್ಷರು
ಡಾ. ಜಿ.ಎಂ. ಸಿದ್ದೇಶ್ವರ – ಸಂಸದರು, ದಾವಣಗೆರೆ.
ಶ್ರೀ ಎಸ್.ಎ. ರವೀಂದ್ರನಾಥ್ – ಮಾಜಿ ಸಚಿವರು, ದಾವಣಗೆರೆ.

ತಮ್ಮ ಸುಖಾಗಮನ ಬಯಸುವವರು :
ಜಾಧವ್, ಪವಾರ್, ಘಾಟ್ಗೆ, ಸಾವಂತ್, ಮಾನೆ ವಂಶಸ್ಥರು ಹಾಗೂ ಬಂಧು-ಮಿತ್ರರು.



ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಸುಧಾಬಾಯಿ ಮತ್ತು ಶ್ರೀ ಯಶವಂತರಾವ್ ಜಾಧವ್
ದೂಡಾ ಮಾಜಿ ಅಧ್ಯಕ್ಷರು, ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷರು, ದಾವಣಗೆರೆ.

ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ಎಲ್ಲರಿಗೂ ಕಳುಹಿಸಲಾಗಿದ್ದು, ಸಮಯದ ಅಭಾವ ಮತ್ತು ಇತರೆ ಕಾರಣಗಳಿಂದ ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ವೈಯುಕ್ತಿಕ ಆಹ್ವಾನವೆಂದು ಭಾವಿಸಿ, ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.

# ವಸತಿ ಯೋಜನೆ ಜಾರಿಗೆ ಆಗ್ರಹಿಸಿ ಧರಣಿ: ಸ್ಥಳಕ್ಕೆ ಶಾಸಕ ಹರೀಶ್ ಭೇಟಿ



ಹರಿಹರ, ಜ. 2- ಭಾನುವಳ್ಳಿ ಹಾಗೂ ಕಡ್ಲೆಗೊಂದಿ ಗ್ರಾಮಗಳ ನಿರ್ವಸತಿಗ ದಲಿತ ಹಾಗೂ ಹಿಂದುಳಿದ ಸಮುದಾಯದವರಿಗೆ ವಸತಿ ಯೋಜನೆ ಜಾರಿಗೆ ಆಗ್ರಹಿಸಿ ನಗರದ ತಾಲ್ಲೂಕು ಕಚೇರಿ ಎದುರು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ)ಯಿಂದ ನಡೆಸುತ್ತಿರುವ ಧರಣಿ ಸ್ಥಳಕ್ಕೆ ಮಂಗಳವಾರ ಶಾಸಕ ಬಿ.ಪಿ. ಹರೀಶ್ ಭೇಟಿ ನೀಡಿ ಮನವಿ ಸ್ವೀಕರಿಸಿದರು.

ನಂತರ ಕದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಎರಡೂ ಗ್ರಾಮಗಳಲ್ಲಿ ದಲಿತ ಹಾಗೂ ಹಿಂದುಳಿದ ಸಮುದಾಯದ ನೂರಾರು ಕುಟುಂಬದವರು ಸಣ್ಣ, ಪುಟ್ಟ ಗುಡಿಸಲು, ನೆರಿಕೆ ಮನೆಗಳಲ್ಲಿಗಳಲ್ಲಿ ಮೂಲ ಸೌಕರ್ಯಗಳಿಲ್ಲದೆ ವಾಸಿಸುತ್ತಿದ್ದಾರೆ ಎಂದರು.

ಈ ಎರಡೂ ಗ್ರಾಮಗಳಲ್ಲಿ ಸರ್ಕಾರಕ್ಕೆ ಸಂಬಂಧಿತ ಜಮೀನುಗಳು ಲಭ್ಯವಿದೆ. ಈ ಕುರಿತು ಕಳೆದ ಎರಡು ವರ್ಷಗಳಿಂದ ಹೋರಾಟ ಮಾಡಲಾಗುತ್ತಿದೆ. ಕಳೆದ ಜೂನ್ ತಿಂಗಳಲ್ಲಿ ಭಾನುವಳ್ಳಿಯಿಂದ ಹರಿಹರದವರೆಗೆ ಪಾದಯಾತ್ರೆಯನ್ನೂ ಮಾಡಲಾಗಿದೆ, ಕಳೆದ 8 ದಿನಗಳಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸುತ್ತಿದ್ದೇವೆ. ಈ ಕುರಿತು ತಾಲ್ಲೂಕು ಹಾಗೂ ಜಿಲ್ಲಾಡಳಿತದವರಿಗೆ ಮನವರಿಕೆ ಮಾಡಿ ವಸತಿ ಸೌಲಭ್ಯ ಕೊಡಿಸಬೇಕೆಂದು ಶಾಸಕರಿಗೆ ಮನವಿ ಮಾಡಿದರು.

ಈ ಕುರಿತು ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆಂದು ಶಾಸಕ ಹರೀಶ್ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹನುಮಜ್ಜಿ ಮಾತೆಂಗಮ್ಮ, ಗ್ರಾಪಂ ಸದಸ್ಯ ತಿಮ್ಮಣ್ಣ ಕಡ್ಲೆಗೊಂದಿ, ಪರಮೇಶ್, ಚೌಡಪ್ಪ ಭಾನುವಳ್ಳಿ, ಹನುಮಂತಪ್ಪ, ಮಲ್ಲಮ್ಮ, ಬಸಮ್ಮ, ನಿರ್ಮಲ, ಹನುಮಕ್ಕ, ಶಹತಾಜ್‌ಬಾನು, ಮಲ್ಕಾಬಿ, ಸೀತಮ್ಮ, ಗಂಗಮ್ಮ ಇದ್ದರು.

# ರಸಋಷಿ ಕುವೆಂಪು ಸಾಹಿತ್ಯ ಲೋಕದಲ್ಲಿ ಅಜರಾಮರ



**ಹರಿಹರ ತಾಲ್ಲೂಕು ಕಸಾಪ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಜೆ. ಕಲೀಂ ಭಾಷ**

ಹರಿಹರ, ಜ. 2 - ಕುವೆಂಪು ಅವರು ಕನ್ನಡ ನಾಡು ಕಂಡ ಅಪರೂಪದ ಸಾಹಿತಿಗಳಾಗಿದ್ದರು. ಅವರು ವಿಶ್ವಮಾನವ ಸಂದೇಶ ಸಾರಿ ಶ್ರೇಷ್ಠ ವ್ಯಕ್ತಿಯಾಗಿದ್ದರು ಎಂದು ಹಿರಿಯ ಸಾಹಿತಿ ಜೆ. ಕಲೀಂ ಭಾಷ ತಿಳಿಸಿದರು.

ನಗರದ ಶ್ರೀ ಗುರು ತಿಪ್ಪೇರುದ್ರ ಸ್ವಾಮಿ ಪ್ರೌಢಶಾಲೆ ಮತ್ತು ಕಸಾಪ ಹರಿಹರ ತಾಲ್ಲೂಕು ಘಟಕಗಳ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಮಾನವ ದಿನಾಚರಣೆ ಮತ್ತು ಶಾಲಾ ಅಂಗಳದಲ್ಲಿ ಸಾಹಿತ್ಯೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ರವರ ಸಾಹಿತ್ಯ ವಿಚಾರ ಧಾರೆಗಳು ಎಂಬ ವಿಷಯ ಕುರಿತು ಅವರು ಮಾತನಾಡಿದರು.

ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎಂಬ ಮಾತಿನಿಂದ ಕನ್ನಡಿಗರ ಭಾಷಾಭಿಮಾನವನ್ನು ಜಾಗೃತಗೊಳಿಸುವಲ್ಲಿ ಕುವೆಂಪು ಅವರು ಅಗ್ರಸ್ಥಾನದಲ್ಲಿದ್ದಾರೆ. ಯುಗದ ಕವಿ ಜಗದ ಕವಿ ವಿಶ್ವಮಾನವ ರಸಋಷಿಯಾಗಿ ಕುವೆಂಪು ಅವರು ಸಾಹಿತ್ಯ ಲೋಕದಲ್ಲಿ ಅಜರಾಮರರಾಗಿದ್ದಾರೆ ಎಂದರು.

ಕನ್ನಡ ನಾಡಿನ ನಾಡಗೀತೆ 'ಜಯ ಭಾರತ ತನುಜಾತೆ ಜಯಹೇ ಕರ್ನಾಟಕ ಮಾತೆ' ಈ ಗೀತೆಯು ಭಾರತ ಮಾತೆಯ ಮತ್ತು ಕನ್ನಡ ತಾಯಿಯ ಹಿರಿಮೆ ಮತ್ತು ಗರಿಮೆಗಳನ್ನು ಸಾರುತ್ತಾ ನಮ್ಮಲ್ಲಿ ದೇಶ ಪ್ರೇಮವನ್ನು ಉಕ್ಕಿಸುತ್ತದೆ. ಓ ನನ್ನ ಚೇತನ ಆಗು ನೀ ಅನಿಕೇತನ ಎಂಬ ಕವನವಂತೂ ಮನುಷ್ಯನ ಜೀವನದ ನಿಲುವನ್ನು ಮಾರ್ಮಿಕವಾಗಿ ಸೂಚಿಸುತ್ತದೆ. ಹುಟ್ಟುವ ಪ್ರತಿ ಮಗುವು ವಿಶ್ವಮಾನವನೇ! ಆ ನಂತರ ಆ ಮಗುವನ್ನು ಜಾತಿ, ಮತದ ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ. ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು. ನೈತಿಕ ವ್ಯಕ್ತಿತ್ವದಿಂದ ಚೇತನಾ ಶೀಲನಾಗಬೇಕು ಎಂಬ ಪರಿಕಲ್ಪನೆ ಅವರದ್ದಾಗಿತ್ತು. ಕುವೆಂಪು ಅವರ ಜೀವಮಾನದ ಬೃಹತ್ ಸಾಹಿತ್ಯದ ಕೃತಿ ಶ್ರೀ ರಾಮಾಯಣ ದರ್ಶನಂ ಆಧುನಿಕ ಭಾರತೀಯ ಸಾಹಿತ್ಯದ ಕೃತಿಯಾಗಿದೆ. ಇದರಲ್ಲಿ ಕುವೆಂಪು ಅವರ ದಾರ್ಶನಿಕತೆ ತುಂಬಾ ಅಪರೂಪದ್ದಾಗಿದ್ದು, ಕನ್ನಡಕ್ಕೆ ಮೊಟ್ಟ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಶ್ರೇಯಸ್ಸು ಈ ಕೃತಿಗೆ ಸಲ್ಲುತ್ತದೆ. ಅವರ ಕನಸಾಗಿದ್ದ ಮಂತ್ರಮಾಂಗಲ್ಯ ಬಹು ಜನರ ಮೆಚ್ಚುಗೆ ಗಳಿಸಿದೆ ಎಂದು ತಿಳಿಸಿದರು.

ನಿವೃತ್ತ ಶಿಕ್ಷಕರಾದ ರಾಮಕೃಷ್ಣಮೂರ್ತಿ, ಚಿದಾನಂದ ಕಂಚಿಕೇರಿ, ರಿಯಾಜ್ ಅಹ್ಮದ್, ಬಿ. ಮಗ್ದುಂ ಮಾತನಾಡಿದರು. ಶ್ರೀ ಗುರು ತಿಪ್ಪೇರುದ್ರ ಸ್ವಾಮಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಬಿ.ಬಿ. ರೇವಣನಾಯ್ಕ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ದತ್ತಿದಾನಿಗಳಾದ ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್, ಶ್ರೀಮತಿ ಶೀಲಾವತಿ ರಾಮಕೃಷ್ಣಮೂರ್ತಿ ಮತ್ತು ಹಾಜಿ ಹಸನ್‌ಸಾಬ್ ನಾಯ್ಕ್ ಇವರ ಸೇವೆಯನ್ನು ಶ್ಲಾಘಿಸಲಾಯಿತು.

ಸುಬ್ರಹ್ಮಣ್ಯ ನಾಡಿಗೇರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಪವಿತ್ರಾ ನೆರವೇರಿಸಿದರು. ಕು.ಸಾನಿಯಾ ಸ್ವಾಗತಿಸಿದರು. ದಿವ್ಯ ವಂದಿಸಿದರು.

## ರೋಗಿ, ಸಂಬಂಧಿ ಬೇಡವೆಂದರೆ ಐ.ಸಿ.ಯು. ಚಿಕಿತ್ಸೆ ಇಲ್ಲ

ನವದೆಹಲಿ, ಜ. 2 - ತೀವ್ರ ನಿಗಾ ಘಟಕಕ್ಕೆ (ಐ.ಸಿ.ಯು.) ಸೇರಿಸದಂತೆ ಅಸ್ವಸ್ಥ ಇಲ್ಲವೇ ಅವರ ಸಂಬಂಧಿಗಳು ತಿಳಿಸಿದ ಸಂದರ್ಭದಲ್ಲಿ, ಆಸ್ಪತ್ರೆಗಳು ದಾಖಲಿಸಿಕೊಳ್ಳುವಂತಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಐ.ಸಿ.ಯು. ದಾಖಲಾತಿಗೆ ಸಂಬಂಧಿಸಿದಂತೆ ಸಚಿವಾಲಯ ಇತ್ತೀಚೆಗೆ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಐ.ಸಿ.ಯು.ನಲ್ಲಿ ಮುಂದುವರೆಸಿದ ನಂತರವೂ ಯಾವುದೇ ಪರಿಣಾಮ ಕಂಡು ಬರುವುದಿಲ್ಲ ಎಂಬ ಸಂದರ್ಭದಲ್ಲಿ, ಚಿಕಿತ್ಸೆ ನೀಡುವುದರಿಂದ ಪ್ರಯೋಜನವಿಲ್ಲ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಐ.ಸಿ.ಯು.ಗೆ ಸೇರಿಸಬಾರದು ಎಂದು ವ್ಯಕ್ತಿಗಳು ಮೊದಲೇ ಸೂಚನೆ ನೀಡಿದ್ದರೆ, ಇಲ್ಲವೇ ಸಜೀವ ಉಯಿಲು ಬರೆದಿದ್ದರೆ, ಅದರಂತೆ ನಡೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

ಮಹಾಮಾರಿ ಇಲ್ಲವೇ ವಿಕೋಪ ಸಂದರ್ಭದಲ್ಲಿ ಸಂಪನ್ಮೂಲ ಕಡಿಮೆ ಇದ್ದಾಗ ರೋಗಿಯನ್ನು ಐ.ಸಿ.ಯು.ನಲ್ಲಿ ಇರಿಸುವ ಬಗ್ಗೆ ಕಡಿಮೆ ಆದ್ಯತೆ ಪ್ರಕರಣವನ್ನು ಪರಿಗಣಿಸಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

## ಕಾರ್ಯದಕ್ಷತೆಯಲ್ಲಿ ಹೈದರಾಬಾದ್, ಬೆಂಗಳೂರು ವಿಮಾನ ನಿಲ್ದಾಣಗಳ ಸಾಧನೆ

ನವದೆಹಲಿ, ಜ. 2 - ಕಾರ್ಯದಕ್ಷತೆಯಲ್ಲಿ ಹೈದರಾಬಾದ್ ಹಾಗೂ ಬೆಂಗಳೂರು ವಿಮಾನ ನಿಲ್ದಾಣಗಳು ಜಾಗತಿಕವಾಗಿ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದಿವೆ.

2023ರಲ್ಲಿ ನಡೆಸಲಾದ ಒಂದು ಬಾರಿ ಸಾಧನೆಯ ಪರಾಮರ್ಶೆ ವರದಿಯ ಪ್ರಕಾರ ಹೈದರಾಬಾದ್ ಹಾಗೂ ಬೆಂಗಳೂರು ಈ ಸಾಧನೆ ಮಾಡಿವೆ. ಅಮೆರಿಕದ ಮಿನ್ನೆಯಾಪೊಲೀಸ್‌ನ ಸೆಂಟ್ ಪೌಲ್ ಇಂಟರ್‌ನ್ಯಾಷನಲ್ ವಿಮಾನ ನಿಲ್ದಾಣ ಮೊದಲ ಸ್ಥಾನದಲ್ಲಿದೆ.

# ಶಿಥಿಲಗೊಂಡ ಭದ್ರಾ ಕಾಲುವೆ - ಸೇತುವೆ ಪರಿಶೀಲನೆ

## ನೀರಾವರಿ ಇಲಾಖೆ ಇಂಜಿನಿಯರ್‌ಗಳಿಗೆ ಕಾಲುವೆಗಳ ದುಸ್ಥಿತಿ ದರ್ಶನ



ದಾವಣಗೆರೆ, ಜ. 2 - ಮಾಯಕೊಂಡ ಕ್ಷೇತ್ರದ ಭದ್ರಾ ಜಲಾಶಯದ ಅಚ್ಚುಕಟ್ಟು ವ್ಯಾಪ್ತಿಯ ಶಿಥಿಲ ಗೊಂಡ ಕಾಲುವೆ ಮತ್ತು ಸೇತುವೆಗಳನ್ನು ಶಾಸಕ ಕೆ.ಎಸ್.ಬಸವಂತಪ್ಪ ಮಂಗಳವಾರ ಅಧಿಕಾರಿ ಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರೈತ ಮುಖಂಡರ ಒತ್ತಾಯದ ಹಿನ್ನೆಲೆಯಲ್ಲಿ ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಕುರ್ಕಿ, ಕಲ್ಪೋರು, ಅಣಬೇರು, ಹಿರೇತೋಗಲೇರಿ ಸೇರಿದಂತೆ ಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ಗ್ರಾಮಗಳ ಕಾಲುವೆಗಳಿಗೆ ಭೇಟಿ ನೀಡಿದ ಶಾಸಕರು, ಶಿಥಿಲಗೊಂಡ ಕಾಲುವೆಗಳು, ಸೇತುವೆಗಳನ್ನು ಅಧಿಕಾರಿಗಳಿಗೆ ತೋರಿಸುವ ಮೂಲಕ ಕಾಲುವೆಯ ಅವ್ಯವಸ್ಥೆಯ ದರ್ಶನ ಮಾಡಿಸಿದರು.

ಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಕಾಲುವೆಗಳನ್ನು ನಿರ್ಮಿಸಿ ಸುಮಾರು 54 ವರ್ಷಗಳು ಕಳೆದಿವೆ. ಅಲ್ಲಿಂದ ಈವರೆಗೂ ಕಾಲುವೆಗಳ ದುರಸ್ತಿಯಾಗಿಲ್ಲ. ಕಾಲುವೆ ನೀರು ಹರಿಸಿದಾಗ ಮತ್ತು ಮಳೆ ಬಂದಾಗ ಸೇತುವೆಗಳು ಶಿಥಿಲಗೊಂಡು ಈಗಾಗಲೇ ಬುನಾದಿ ಕಿತ್ತುಕೊಂಡು ಹೋಗಿ ಕಲ್ಲುಗಳು ಮಾತ್ರ ಉಳಿದಿವೆ.

ಮತ್ತೆ ಈಗ ಕಾಲುವೆಗೆ ನೀರು ಹರಿಸಿದರೆ ಶಿಥಿಲಗೊಂಡ ಸೇತುವೆಗಳು ಕಿತ್ತುಕೊಂಡು ಹೋಗುತ್ತವೆ. ಅಷ್ಟೇ ಅಲ್ಲ, ಗದ್ದೆಗಳಿಗೆ ನೀರು ನುಗ್ಗಿ ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ನಾಟಿ ಮಾಡಿದ ಭತ್ತದ ಸಸಿಗಳು ನೀರಿನೊಂದಿಗೆ ಕೊಚ್ಚಿ ಹೋಗುತ್ತದೆ. ಮತ್ತೆ ನೀರು ನಿಲ್ಲಿಸಿದರೆ, ಇತ್ತ ನೀರು ವ್ಯರ್ಥ, ಅತ್ತ ರೈತರ ಪರಿಶ್ರಮವೂ ವ್ಯರ್ಥ. ಇದು ತಪ್ಪಬೇಕಾದರೆ 20 ರಿಂದ 25 ಕೋಟಿ ರೂ. ವೆಚ್ಚದಲ್ಲಿ ವೈಜ್ಞಾನಿಕವಾಗಿ ಗುಣಮಟ್ಟದ ಸೇತುವೆಗಳನ್ನು ನಿರ್ಮಿಸಿದರೆ ರೈತರ ಹಿತ ಕಾಪಾಡಿದಂತಾಗುತ್ತದೆ. ಜೊತೆಗೆ ಕೊನೆ ಭಾಗದ ರೈತರಿಗೂ ನೀರು ತಲುಪತ್ತದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

> ಮಾಯಕೊಂಡ ಕ್ಷೇತ್ರದ ಭದ್ರಾ ಜಲಾಶಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ಶಿಥಿಲಗೊಂಡ ಎಲ್ಲಾ ಕಾಲುವೆ ಮತ್ತು ಸೇತುವೆಗಳನ್ನು ನಿರ್ಮಾಣ ಮಾಡುವುದಕ್ಕೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ, ಬೇಕಾದ ಅನುದಾನ ಬಿಡುಗಡೆಗೆ ಮನವಿ ಮಾಡುತ್ತೇನೆ.
>
> **-ಕೆ.ಎಸ್.ಬಸವಂತಪ್ಪ, ಶಾಸಕ.**

ಭದ್ರಾ ಜಲಾಶಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ಕಾಲುವೆಗಳು ದುಸ್ಥಿತಿ ಬಗ್ಗೆ ಸಂಬಂಧಪಟ್ಟ ನೀರಾವರಿ ಇಲಾಖೆ ಇಂಜಿನಿಯರ್‌ಗಳು ಆಗಿಂದಾಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕಾಲುವೆಗಳು ಮತ್ತು ಸೇತುವೆಗಳ ಗುಣಮಟ್ಟದ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ಒಂದು ವೇಳೆ ಶಿಥಿಲಗೊಂಡಿದ್ದರೆ ಕೂಡಲೇ ದುರಸ್ತಿ ಪಡಿಸುವ ಕೆಲಸ ಮಾಡಿದರೆ ಇಂತಹ ಸ್ಥಿತಿ ಬರುವುದಿಲ್ಲ. ನೀವು ಸ್ಥಳಕ್ಕೆ ಭೇಟಿ ನೀಡಿ ಕಾಲುವೆಗಳು ಮತ್ತು ಸೇತುವೆಗಳನ್ನು ಸುಸ್ಥಿತಿಯಲ್ಲಿಡುವ ಕೆಲಸ ಮಾಡಬೇಕೆಂದು ಸ್ಥಳದಲ್ಲಿದ್ದ ಇಂಜಿನಿಯರ್‌ಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ನೀರಾವರಿ ಇಲಾಖೆಯ ಎಇಇ ಮನೋಜ್‌ಕುಮಾರ್, ಜೆಇ ಪರಮೇಶ್ವರಪ್ಪ ಹಾಗೂ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ರೈತ ಮುಖಂಡರು ಹಾಜರಿದ್ದರು.

## ಬಸಾಪುರದಲ್ಲಿ ಇಂದು ಮಹೇಶ್ವರ ಜಾತ್ರೆ

ದಾವಣಗೆರೆ - ಬಸಾಪುರದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 11 ಗಂಟೆಯಿಂದ ಇಡೀ ದಿನ ಅನ್ನ, ಸಾರು ಮತ್ತು ಅನ್ನ ಮಜ್ಜಿಗೆ ಸಾರು ಪ್ರಸಾದ ನೆರವೇರಲಿದೆ.

## ಬಸವನಾಳ್‌ನಲ್ಲಿ ಇಂದು ಮಹೇಶ್ವರ ಜಾತ್ರೆ

ದಾವಣಗೆರೆ ತಾಲ್ಲೂಕು ಬಸವನಾಳು ಗ್ರಾಮದ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ಪ್ರಸಾದ ಸೇವೆ ನಡೆಯಲಿದೆ. ಸಂಜೆ 4 ಗಂಟೆಗೆ ಹರಾಜಿನ ನಂತರ ಸ್ವಾಮಿಯನ್ನು ಅಲಂಕಾರ ಮಾಡಿ ಅಡ್ಡಪಲ್ಲಕ್ಕಿಯಲ್ಲಿ ಗುಡಿ ತುಂಬಲಾಗುವುದು.

## ಗಡಿಯಲ್ಲಿ ಡ್ರೋನ್ ಮೂಲಕ ಕಳ್ಳಸಾಗಣೆಗೆ ಆರು ತಿಂಗಳಲ್ಲಿ ತಡೆ

ನವದೆಹಲಿ, ಜ. 2 - ಗಡಿಯಲ್ಲಿ ಡ್ರೋನ್ ಮೂಲಕ ನಡೆಸಲಾಗುತ್ತಿರುವ ಶಸ್ತ್ರಾಸ್ತ್ರ ಹಾಗೂ ಮಾದಕಗಳ ಕಳ್ಳ ಸಾಗಣೆ ಆರು ತಿಂಗಳಲ್ಲಿ ನಿಲ್ಲಲಿದೆ. ಇದಕ್ಕಾಗಿ ದೇಶೀಯ ಡ್ರೋನ್ ನಿಗ್ರಹ ತಂತ್ರಜ್ಞಾನ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೂರು ರೀತಿಯ ಡ್ರೋನ್ ನಿಗ್ರಹ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸಲಾ ಗುತ್ತಿದೆ. ಅಂತಿಮವಾಗಿ ಈ ಮೂರೂ ತಂತ್ರಜ್ಞಾನಗಳ ಪ್ರತ್ಯೇಕ ಇಲ್ಲವೇ ಸಂಯೋಜಿತ ಬಳಕೆ ಮಾಡಲಾ ಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೂತನ ತಂತ್ರಜ್ಞಾನದ ಪ್ರಯೋಗಗಳು ನಡೆಯುತ್ತಿವೆ. ಪ್ರಸಕ್ತ ಪ್ರಯೋಗಗಳು ಅಂತಿಮ ಹಂತದಲ್ಲಿವೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದ ಮೂಲಕ ಡ್ರೋನ್ ಇಲ್ಲವೇ ಮಾನವ ರಹಿತ ವಾಹನಗಳನ್ನು ಬಳಸಿ ಶಸ್ತ್ರಾಸ್ತ್ರಗಳ ಕಳ್ಳಸಾಗಣೆ ಮಾಡಲಾಗುತ್ತಿದೆ. ಪಂಜಾಬ್ ಹಾಗೂ ಜಮ್ಮು - ಕಾಶ್ಮೀರಗಳಲ್ಲಿ ಇದು ಪ್ರಮುಖ ಸಮಸ್ಯೆಯಾಗಿದೆ.

ಡ್ರೋನ್ ಮೂಲಕ ಕಳ್ಳಸಾಗಣೆ ಮಾಡುವ 53 ಪ್ರಕರಣಗಳು ಪಂಜಾಬ್‌ನಲ್ಲಿ ಕಳೆದ ಮೂರು ವರ್ಷಗಳಲ್ಲಿ ಪತ್ತೆಯಾಗಿವೆ.



## ವೀರ ಯೋಧನನ್ನು ಸ್ವಾಗತಿಸಿದ ಸಂಸದ ಜಿ.ಎಂ.ಸಿದ್ದೇಶ್ವರ

ಚನ್ನಗಿರಿ, ಜ. 2- ತಾಲ್ಲೂಕಿನ ಮಾದೇನಹಳ್ಳಿ ಗ್ರಾಮದ ಶ್ರೀನಿವಾಸ್ ಅವರು ಸುಮಾರು ಹದಿನೈದಕ್ಕೂ ಹೆಚ್ಚು ವರ್ಷಗಳ ದೇಶ ಸೇವೆ ಪೂರ್ಣಗೊಳಿಸಿ ತಾಯ್ನಾಡಿಗೆ ಮರಳಿದಾಗ ಬೃಹತ್ ಮೆರವಣಿಗೆ ಮೂಲಕ ಚನ್ನಗಿರಿಯಲ್ಲಿ ಸ್ವಾಗತಿಸಲಾಯಿತು. ಇದೇ ವೇಳೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ವೀರ ಯೋಧನನ್ನು ಅಭಿನಂದಿಸಿದರು.

## ಮಾದಕ ದ್ರವ್ಯ ಮುಕ್ತ ರಾಜ್ಯ ಗುರಿ : ಪರಮೇಶ್ವರ್

ಬೆಂಗಳೂರು, ಜ. 2 - ಕರ್ನಾಟಕವನ್ನು 'ಮಾದಕ ದ್ರವ್ಯ ಮುಕ್ತ' ರಾಜ್ಯವನ್ನಾಗಿಸುವುದು ಪ್ರಮುಖ ಗುರಿಯಾಗಬೇಕು, ಮುಖ್ಯಮಂತ್ರಿಗಳು ಸಹಾ ಇದನ್ನೇ ಬಯಸಿದ್ದಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದರು.

ಪೊಲೀಸ್ ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಮಾತನಾಡಿದ ಅವರು, ಡ್ರಗ್ಸ್ ಮುಕ್ತ ಕರ್ನಾಟಕ ನಿರ್ಮಾಣಕ್ಕೆ 'ಕ್ರಿಯಾ ಯೋಜನೆ' ರೂಪಿಸಬೇಕು, ಕೆಲವು ದೇಶಗಳ ಪ್ರಜೆಗಳು ಹೆಚ್ಚಾಗಿ ಮಾದಕ ದ್ರವ್ಯ ಚಟುವಟಿಕೆಗಳಲ್ಲಿ ತೊಡಗುತ್ತಿದ್ದು, ಹಲವು ವರ್ಷಗಳಿಂದ ವಾಸಿಸುತ್ತಿರುವ ಹಾಗೂ ನಗರಕ್ಕೆ ಬರುವ ವಿದೇಶಿ ಪ್ರಜೆಗಳ ಮೇಲೆ ನಿಗಾವಹಿಸಬೇಕು ಎಂದರು.

ರಾಜ್ಯದಲ್ಲಿ ಗುಂಪು ಗಲಭೆಗಳು ಕಡಿಮೆಯಾಗಿವೆ, ಅಮಾಯಕ ಮಕ್ಕಳು ಅಪರಾಧ ಪ್ರಕರಣಗಳಲ್ಲಿ ಸಿಲುಕದಂತೆ ಗಮನಹರಿಸಬೇಕು, ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಅರಿವು ಮೂಡಿಸಬೇಕು ಎಂದು ಸಚಿವರು ಹೇಳಿದರು.

# ಬಡ ಮಕ್ಕಳಿಗೆ ಸಂಸ್ಥೆಗಳ ನೆರವು ಸಿಗಲಿ

## ಮಲೇಬೆನ್ನೂರಿನಲ್ಲಿ ಬಿಇಓ ಹನುಮಂತಪ್ಪ ಮನವಿ



ಮಲೇಬೆನ್ನೂರು, ಜ. 2 - ಇಲ್ಲಿನ ಆಶ್ರಯ ಕಾಲೋನಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಉರ್ದು ಶಾಲೆಯ ವಿದ್ಯಾರ್ಥಿ ಗಳಿಗೆ ಬೆಂಗಳೂರಿನ ಆಪತ್ ಸಹಾಯ ಸಂಸ್ಥೆ ನೀಡಿದ ಶಾಲಾ ಬ್ಯಾಗ್ ಮತ್ತು ನೋಟ್ಸ್ ಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿ ಕಾರಿ ಹನುಮಂತಪ್ಪ ವಿತರಿಸಿದರು.

ನಂತರ ಮಾತನಾಡಿದ ಬಿಇಓ ಹನುಮಂತಪ್ಪ ಬಡ ಮಕ್ಕಳು ಅಭ್ಯಾಸ ಮಾಡುತ್ತಿರುವ ಶಾಲೆಗಳನ್ನು ಗುರುತಿಸಿ, ಸಂಸ್ಥೆಯಿಂದ ನೀಡುವ ವಸ್ತುಗಳನ್ನು ಆದ್ಯತೆ ಮೇರೆಗೆ ನೀಡಲು ಶಿಕ್ಷಕ ಸಂಘದ ಪದಾಧಿಕಾರಿಗಳು ಗಮನಹರಿಸಬೇಕೆಂದು ಸಲಹೆ ನೀಡಿದರು.

ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ್ ಹೆಗ್ಡೆ ಮಾತನಾಡಿ ಬೆಂಗಳೂರಿನ ಸುಧಾರ್, ಕೃತಗ್ಯತಾ ಟ್ರಸ್ಟ್ ಹಾಗೂ ಆಪತ್ ಸಹಾಯ ಸಂಸ್ಥೆಯಿಂದ ಹರಿಹರ ತಾಲ್ಲೂಕಿನ 40 ಶಾಲೆಗಳ ಸಾವಿರಾರು ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಬ್ಯಾಗ್, ನಲಿಕಲಿ ಪೀಠೋಪಕರಣಗಳನ್ನು ನೀಡಲಾಗಿದೆ.

ಶಾಲೆಗಳಿಂದ ಬೇಡಿಕೆ ಬಂದಲ್ಲಿ ಸಂಸ್ಥೆಗಳ ಜೊತೆ ಚರ್ಚಿಸುತ್ತೇನೆ ಎಂದರು.

ಶಾಲಾ ಮುಖ್ಯ ಶಿಕ್ಷಕ ಮಹ್ಮದ್ ಖಲೀಲ್, ಶಿಕ್ಷಕರಾದ ಪೀರುನಾಯ್ಕ, ಪ್ರವೀಣ್, ಆನಂದ್, ಯಸ್ಮಿನ್, ಸೈಯಿದಾ, ಮ. ರಜಾಕವುಲ್ಲಾ, ಅಲ್ತಾಫ್, ಮುಸ್ತಾಫಾ, ವೀರಣ್ಣ ಮತ್ತಿತರರು ಈ ವೇಳೆ ಹಾಜರಿದ್ದರು.

## ಈ ಪರಿಯ ಸೊಬಗು

ಅಡುಗೆ ಮನೆಯ ಸೊಬಗಿನ ಕಟ್ಟೆ
ಚೆಲ್ಲಾಪಿಲ್ಲಿಯಾಗಿಹುದೆಲ್ಲೆಡೆ ಕೊಟ್ಟೆ
ಅಲ್ಲಿ, ಇಲ್ಲಿ ಹರಡಿದೆ ಲೋಟ.... ತಟ್ಟೆ
ಕಂಡ ಕಣ್ಣಿಗೆ ಬಂತೇ ಭಾರಿ..... ಸಿಟ್ಟೆ!!

ಹುರಿದ ಉಪ್ಪಿಟ್ಟಿನ ರವೆಯೆಲ್ಲಡೇ ಚೆಲ್ಲಿ
ತರಕಾರಿ ಸಿಪ್ಪೆಯದೋ ಕಾಲಡಿಯಲ್ಲಿ....
ಕಾಫೀ ಪುಡಿಯ....ಡಬ್ಬಿಯ ಮುಚ್ಚಳವೆಲ್ಲಿ?
ಉಪ್ಪು... ಸಕ್ಕರೆ.... ಹೋದುದ್ದಾದರು ಎಲ್ಲಿ?


ಪಾತ್ರೆ... ಪಗಡಿ....ಸಿಗದದು ಅಡ್ಡಾದಿಡ್ಡಿ
ಮಿಕ್ಸಿ ಜಾರು, ಚಾಕು, ಕತ್ತರಿ ಹುಡುಕಿ ಕೊಡಿ
ಎಲ್ಲೂ ಕಾಣದು ಡಬ್ಬಿ.....ಸಿಗದ ಬೆಂಕಿ ಕಡ್ಡಿ
ಹುಡುಕಲು ಹೋದರೆ ಸಿಗದ ದೀಪದ ಬುಡ್ಡಿ!

ಅಡುಗೆ ಮನೆಯಾಗಿದೆ ಭಾರೀ ಕಸದ ತೊಟ್ಟಿ
ಶುಂಠಿಯ ಚೂರು... ಸಿಡಿದಿದೆ ಕುಟ್ಟಿ... ಕುಟ್ಟಿ
ತಟ್ಟಿ.. ತಟ್ಟಿ ಮಾಡಿದ ಜೋಳದ ಹಿಟ್ಟಿನ ರೊಟ್ಟಿ
ತಿನ್ನಲು ಆಗದು ಜಗಿಯಲು ಅದು ಬಲು ಗಟ್ಟಿ!!

ಅನಾರೋಗ್ಯದಿ ಮಲಗಲು ಮನೆಯೊಡತಿ....
ಈ ಪರಿಯಲ್ಲಿ ಕಾಣು...ಅಡುಗೆ ಮನೆಯ ಗತಿ!!
ಕಂಡ ಬೆರಗಿಗೆ ತಿರುಗುವದಿಲ್ಲ ಅಲ್ಲವೇ ಗೋಣು?
ಹೌದಲ್ಲವೇ? ಮನೆಗೆ ಹೆಣ್ಣಲ್ಲವೆ ಬೆಳಕಿನ ಕಣ್ಣು!!

**- ವೀಣಾ ಕೃಷ್ಣಮೂರ್ತಿ, ದಾವಣಗೆರೆ**

# ನನ್ನ ಪಾದಯಾತ್ರೆಗೆ ರಾಹುಲ್‌ರ ಭಾರತ್ ಜೋಡೋ ಪ್ರೇರಣೆ



**ಹೊನ್ನಾಳಿಯಲ್ಲಿ ಕಾಂಗ್ರೆಸ್ ಮುಖಂಡ ಜಿ.ಬಿ. ವಿನಯ್ ಕುಮಾರ್**

ಹೊನ್ನಾಳಿ, ಜ.2- ಡಿಸೆಂಬರ್ 18 ರಿಂದ 98 ಹಳ್ಳಿಗಳನ್ನು ಸಂಚರಿಸಿ 280 ಕಿಲೋ ಮೀಟರ್ ತಮ್ಮ ಪಾದಯಾತ್ರೆ ಸಾಗಿದ್ದು, ಮಂಗಳವಾರ ಹೊನ್ನಾಳಿ ತಾಲ್ಲೂಕಿನ ಕೋಣನತಲೆ ಗ್ರಾಮದಿಂದ ಹೊನ್ನಾಳಿ ತಾಲ್ಲೂಕಿಗೆ 'ವಿನಯ್ ನಡಿಗೆ ಹಳ್ಳಿಯ ಕಡೆಗೆ' ಪಾದಯಾತ್ರೆಯ ಪ್ರವಾಸ ಮುಂದುವರೆಸಿರುವುದಾಗಿ ಕಾಂಗ್ರೆಸ್ ಮುಖಂಡ ಜಿ.ಬಿ. ವಿನಯ್ ಕುಮಾರ್ ತಿಳಿಸಿದರು.

ತಾಲ್ಲೂಕಿನ ಕೋಣನತಲೆ ಗ್ರಾಮದಿಂದ ಹಮ್ಮಿಕೊಂಡಿದ್ದ ಪಾದಯಾತ್ರೆಯ ಸಂದರ್ಭದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು. ಹೊನ್ನಾಳಿ ಹಾಗೂ ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಇಂದಿನಿಂದ ಜನವರಿ 5 ರ ವರೆಗೆ 32 ಹಳ್ಳಿಗಳಲ್ಲಿ ಪಾದಯಾತ್ರೆ ಮುಂದುವರೆಯಲಿದೆ ಎಂದರು.

ಹೊನ್ನಾಳಿ ತಾಲ್ಲೂಕಿನ ಅಹಿಂದ ಮುಖಂಡ ಎಚ್.ಎ. ಉಮಾಪತಿ ಮಾತನಾಡಿ, ರಾಜಕೀಯ ಪ್ರವೇಶದಲ್ಲಿ ವಿನಯ್ ಕುಮಾರ್ ಅವರಿಗೆ ಯಶಸ್ಸು ಸಿಗಲಿ ಎಂದು ಹಾರೈಸಿದರು.

ಹೊನ್ನಾಳಿ ಕಾಂಗ್ರೆಸ್ ಮುಖಂಡ ಅರಕ್ ಸಿದ್ದಪ್ಪ ಮಾತನಾಡಿ, ಸಮಾಜಮುಖಿ ಕೆಲಸ ಮಾಡುವವರಿಗೆ ರಾಜಕೀಯ ಅವಕಾಶ ಸಿಗುವಂತಾಗಬೇಕಿದೆ ಎಂದರು.

ಕೋಣನತಲೆಯಿಂದ ಪಾದಯಾತ್ರೆಯ ಮೂಲಕ ಹರಗನಹಳ್ಳಿ, ಹಿರೇಗೋಣಿಗೆರೆ, ಚಿಕ್ಕಗೋಣಿಗೆರೆ, ಕೋಟೆ ಮಲ್ಲೂರು, ಬೆಲೆಮಲ್ಲೂರು, ಗೊಲ್ಲರಹಳ್ಳಿ ಮಾರ್ಗವಾಗಿ ರಾತ್ರಿ 9 ಗಂಟೆಗೆ ಹೊನ್ನಾಳಿಯ ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸ್ವಾಗತಿಸಲಾಯಿತು. ನಂತರ ಅವರು ಹೊನ್ನಾಳಿಯಲ್ಲಿ ವಾಸ್ತವ್ಯ ಮಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಚ್.ಬಿ. ಶಿವಯೋಗಿ, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಂಜಿತ್, ಕರವೇ ಶ್ರೀನಿವಾಸ್, ಮಾದನಬಾವಿ ಕರಿಬಸಪ್ಪ, ಕೋಣನತಲೆ ಗ್ರಾಮ ಪಂಚಾಯಿತಿ ಸದಸ್ಯ ನಾಗೇಂದ್ರಪ್ಪ, ಗೋಣಿಗೇರಿ ಗ್ರಾಮ ಪಂಚಾಯತ್ ಅಧ್ಯಕ್ಷ ನಾಗಪ್ಪ ಹರಗನಹಳ್ಳಿ, ಮಾಲತೇಶ್, ಕರಿಯಪ್ಪ, ಪರಮೇಶ್ವರಪ್ಪ, ಗಿರಿಯಪ್ಪ ಗೋಣಿಗೆರೆ, ಕೆ. ಶಿವಮೂರ್ತಿ, ಗಂಗೋಜಿರಾವ್ ಹಿರೇಮಠ ಮುತ್ತು, ಪರಮೇಶ್ವರಪ್ಪ ಇನ್ನಿತರರಿದ್ದರು.

ವಿನಯ್‌ರವರ ಬುಧವಾರದ ಪಾದಯಾತ್ರೆಯು ಸುಂಕದಕಟ್ಟೆ ಅರಬಗಟ್ಟೆ, ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿ ಮಾದನ ಬಾವಿ ಅರೇಹಳ್ಳಿ ಕೊಡಚಗೊಂಡನಹಳ್ಳಿ ಮೂಲಕ ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಗ್ರಾಮದಲ್ಲಿ ವಾಸ್ತವ್ಯ ಮಾಡಲಾಗುವುದು.

# ಮನೆಯಲ್ಲಿ ಸರಳತೆ, ಪ್ರೀತಿ ವಿಶ್ವಾಸವಿರಲಿ



**ಹೆಗ್ಗೆರೆ ಗ್ರಾಮದ ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ**

ಭರಮಸಾಗರ, ಜ.2- ಮನೆಯಲ್ಲಿ ಸರಳತೆ, ಪ್ರೀತಿ, ವಿಶ್ವಾಸ ಇದ್ದರೆ ಮನಸ್ಸೂ ಸಹ ಶಾಂತವಾಗಿರುತ್ತದೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಹೆಗ್ಗೆರೆ ಗ್ರಾಮದ 'ಶ್ರೀ ಧ್ವನಿ' ನಿಲಯ ಗೃಹ ಪ್ರವೇಶದ ಕಾರ್ಯಕ್ರಮ ದಲ್ಲಿ ಪಾಲ್ಗೊಂಡು ಮಾತನಾಡಿದ ಶ್ರೀಗಳು, ಚಿಕ್ಕ ಮನೆ ಕಟ್ಟಿ ಜೀವನ ನಡೆಸುವುದು ಸುಂದರವಾಗಿರುತ್ತದೆ. ಬಂಗಲೆ ಕಟ್ಟಿದರೆ ತೊಂದರೆಗಳೇ ಹೆಚ್ಚು ಎಂದರು. ಮನೆಯ ಯಜಮಾನ ಯವಾಗಲೂ ನಗುತ್ತಿರಬೇಕು. ಮನೆಗೆ ಯಾರೇ ಬಂದರೂ ಅವರನ್ನು ಪ್ರೀತಿ- ವಿಶ್ವಾಸ ದಿಂದ ವಿಚಾರಿಸಿಕೊಳ್ಳಬೇಕು. ಇದರಿಂದ ಆತ್ಮೀಯತೆ ಸಂಬಂಧಗಳು ಬೆಳೆಯುತ್ತವೆ ಎಂದು ನುಡಿದರು.

ಸಿರಿಗೆರೆ ಕಾಲೇಜಿನ ನಿವೃತ್ತ ಉಪನ್ಯಾಸಕ ಎ.ಜಿ. ಚಂದ್ರಶೇಖರ್, ಕೋಗುಂಡೆ ಮಂಜಣ್ಣ, ಡಿ.ಎಸ್. ಪ್ರದೀಪ್, ಹೆಗ್ಗೆರೆಯ ಹಿರಿಯ ಮುನಿಯಪ್ಪ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶ್ರೀಮತಿ ಟಿ.ಬನಶ್ರೀ, ಎಚ್. ಡಿ. ಯೋಗೇಶ್ ದಂಪತಿಗಳು ಸಾಣೇಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ರಂಗ ಮಂದಿರಕ್ಕೆ 1 ಲಕ್ಷ ರೂ. ದೇಣಿಗೆ ನೀಡಿದರು. ಯೋಗ ಶಿಕ್ಷಕ ತಿಪ್ಪೇಸ್ವಾಮಿ ನಿರೂಪಿಸಿದರು. ನಾಗರಾಜ್ ವಂದಿಸಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಹಿಂದೂ ಕಾರ್ಯಕರ್ತರ ಬಂಧನದ ವಿರುದ್ಧ ಇಂದು ಪ್ರತಿಭಟನೆ

ಬೆಂಗಳೂರು, ಜ. 2 – ಹಳೆಯ ಪ್ರಕರಣಗಳ ಹಿನ್ನೆಲೆಯಲ್ಲಿ ಹಿಂದೂ ಕಾರ್ಯಕರ್ತರನ್ನು ಬಂಧಿಸಿರುವುದನ್ನು ಖಂಡಿಸಿ ಬಿಜೆಪಿ ಮಂಗಳವಾರ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಿದೆ.

ಹಿಂದೂ ಕಾರ್ಯಕರ್ತ ಶ್ರೀಕಾಂತ್ ಪೂಜಾರಿ ಬಂಧನ ಖಂಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅಯೋಧ್ಯೆಯಲ್ಲಿ ರಾಮಮಂದಿರದ ಶಂಕುಸ್ಥಾಪನೆಗೆ ಕೆಲವೇ ದಿನಗಳ ಮೊದಲು 31 ವರ್ಷಗಳ ಹಿಂದಿನ ಪ್ರಕರಣವನ್ನು ಪುನಃ ತೆರೆಯುವುದರ ಹಿಂದೆ ರಾಜ್ಯ ಸರ್ಕಾರದ ದುರುದ್ದೇಶವಿದೆ ಎಂದು ಆರೋಪಿಸಿದರು.

ಬಂಧನ ಖಂಡಿಸಿ ನಾಳೆ ಬಿಜೆಪಿ ಕರ್ನಾಟಕದಾದ್ಯಂತ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ. ರಾಜ್ಯದ ಈಗಿನ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿಯಾಗಿದೆ ಎಂದು ಟೀಕಿಸಿದರು.

# ಚುನಾವಣಾ ಆಯುಕ್ತರ ನೇಮಕ ಕಾಯ್ದೆ ಪ್ರಶ್ನಿಸಿ ಅರ್ಜಿ

ನವದೆಹಲಿ, ಜ. 2 – ಮುಖ್ಯ ಚುನಾವಣಾಧಿಕಾರಿ ಹಾಗೂ ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾಯ್ದೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ನೂತನ ಕಾಯ್ದೆಯನ್ನು ರದ್ದುಗೊಳಿಸಬೇಕು. ಇದರಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಇದೆ ಎಂದು ವಕೀಲ ಗೋಪಾಲ್ ಸಿಂಗ್ ಅವರು ಅರ್ಜಿ ದಾಖಲಿಸಿದ್ದಾರೆ.

ಆಯುಕ್ತರ ನೇಮಕಕ್ಕಾಗಿ ಸ್ವತಂತ್ರ ಹಾಗೂ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಬೇಕು. ತಟಸ್ಥ ಹಾಗೂ ಸ್ವತಂತ್ರ ಆಯ್ಕೆ ಸಮಿತಿ ಇರಬೇಕು ಎಂದು ಅರ್ಜಿ ಸಲ್ಲಿಸಲಾಗಿದೆ.

# ಸೋತ ನಾಯಕರಿಂದ ದೆಹಲಿ ಕಡೆ ಆಸಕ್ತಿ

## ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಆಶಾಭಾವನೆ

ಬೆಂಗಳೂರು, ಜ. 2 - ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡ ಕೆಲ ಬಿಜೆಪಿ ನಾಯಕರು ಕೇಂದ್ರ ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ.

ಇದರ ಜೊತೆಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಿ.ಪಿ ಯೋಗೇಶ್ವರ್ ಸೇರಿದಂತೆ, ಹಲವು ಮುಖಂಡರು ದೆಹಲಿ ರಾಜಕಾರಣಕ್ಕೆ ತೆರಳಲು ಆಸಕ್ತಿ ತೋರುತ್ತಿದ್ದಾರೆ.

ರಾಜ್ಯ ಬಿಜೆಪಿ ಆಡಳಿತದಲ್ಲಿ ಸತತವಾಗಿ ಅಧಿಕಾರ ಅನುಭವಿಸಿದ ಗೋವಿಂದ ಕಾರಜೋಳ, ಶ್ರೀರಾಮುಲು ಅಲ್ಲದೆ, ಸಿ.ಟಿ. ರವಿ, ಡಾ.ಕೆ.ಸುಧಾಕರ್ ಸೇರಿದಂತೆ ಕೆಲವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿದ್ದರು.

ಇವರೆಲ್ಲರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿದು, ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆಯ ಅಲೆಯಲ್ಲಿ ಜಯಗಳಿಸಿ ಸಂಸದರಾಗುವುದಷ್ಟೇ ಅಲ್ಲದೆ, ಸಚಿವ ಸ್ಥಾನವೂ ದಕ್ಕಬಹುದೆಂಬ ಆಶಾಭಾವನೆಯಲ್ಲಿದ್ದಾರೆ.

ಬಸವರಾಜ ಬೊಮ್ಮಾಯಿ ಹಾವೇರಿ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದು ಕೇಂದ್ರ ರಾಜಕಾರಣಕ್ಕೆ ತೆರಳುವ ಉತ್ಸಾಹದಲ್ಲಿದ್ದಾರೆ. ಸಂಸದರಾದರೆ ತಮ್ಮ ಹಿರಿತನ, ಜಾತಿ ಆಧಾರದ ಮೇಲೆ ತಮಗೆ ಕೇಂದ್ರದಲ್ಲಿ ಅಧಿಕಾರ ದಕ್ಕಬಹುದು ಎಂಬ ಆಲೋಚನೆಯಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗೋವಿಂದ ಕಾರಜೋಳ ವಿಜಯಪುರ



ಮೀಸಲು ಕ್ಷೇತ್ರದಿಂದ, ಶ್ರೀರಾಮುಲು ಬಳ್ಳಾರಿ ಮೀಸಲು, ಸಿ.ಟಿ. ರವಿ ಬೆಂಗಳೂರು ಉತ್ತರ ಇಲ್ಲವೇ ಉಡುಪಿ-ಚಿಕ್ಕಮಗಳೂರು, ಡಾ.ಕೆ.ಸುಧಾಕರ್ ಚಿಕ್ಕಬಳ್ಳಾಪುರ ಇಲ್ಲವೇ ಬೆಂಗಳೂರು ಉತ್ತರ ಕ್ಷೇತ್ರದಿಂದ ಕಣಕ್ಕಿಳಿಯಲು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ಮಾಜಿ ಸಚಿವ, ಹಾಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ ಯೋಗೇಶ್ವರ್ ಬೆಂಗಳೂರು ಗ್ರಾಮಾಂತರದಿಂದ ಕಣಕ್ಕಿಳಿದು ಸಂಸದರಾಗಿ ಒಕ್ಕಲಿಗ ಕೋಟಾದ ಮೇಲೆ ಸಚಿವರಾಗಬಹುದೆಂಬ ಲೆಕ್ಕಾಚಾರದಲ್ಲಿದ್ದಾರೆ ಎಂದು ಮೂಲಗಳು ಹೇಳಿವೆ.

ಇದೇ ರೀತಿ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿರುವ ಪ್ರಭಾವೀ ನಾಯಕರುಗಳು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿದು ಅಧಿಕಾರ ಪಡೆಯುವ ಹಂಬಲದಲ್ಲಿದ್ದಾರೆ, ಅಷ್ಟೇ ಅಲ್ಲ, ಟಿಕೆಟ್ ಪಡೆಯಲು ತಮ್ಮ ಮುಖಂಡರುಗಳ ಮೂಲಕ ಪ್ರಭಾವ ಬೀರುತ್ತಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೆಲವು ದಿನಗಳಲ್ಲೇ ಹಲವು ಕಾರಣಗಳಿಗೆ ತಮ್ಮ ವರ್ಚಸ್ಸನ್ನು ಕುಂದಿಸಿಕೊಂಡಿದೆ.

ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಸರ್ಕಾರಕ್ಕೆ ಪ್ರಾರಂಭದಲ್ಲಿ ಇದ್ದ ವರ್ಚಸ್ಸು ನಂತರದ ಬೆಳವಣಿಗೆಗಳಲ್ಲಿ ಕುಂದುತ್ತಿದೆ ಎಂಬ ಭಾವನೆ ಬಿಜೆಪಿಯಲ್ಲಿದೆ.

ಹಿಂದುಳಿದ ವರ್ಗಗಳ ಆಯೋಗದ ವರದಿ ಅನುಷ್ಠಾನಕ್ಕೆ ಮುಂದಾದುದು, ಲಿಂಗಾಯತ ಹಾಗೂ ಒಕ್ಕಲಿಗರ ಕೆಂಗಣ್ಣಿಗೆ ಸರ್ಕಾರ ಗುರಿಯಾಗಿದೆ.

ಎರಡೂ ಸಮುದಾಯಗಳು ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಬೆಂಬಲಿಸಿದ್ದವು, ಈ ಕಾರಣಕ್ಕೆ ವಿರೋಧವಾಗುವುದರ ಜೊತೆಗೆ ಅತಿಯಾಗಿ ಅಲ್ಪಸಂಖ್ಯಾತರನ್ನು ಓಲೈಸುತ್ತಿರುವುದು ಉಳಿದ ಸಮಾಜಗಳವರಿಗೆ ಕಿರಿಕಿರಿ ಉಂಟು ಮಾಡಿದೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಗುಂಗಿನಲ್ಲಿ ಉಳಿದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ಕೊಡುತ್ತಿಲ್ಲ, ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಮೂಲಸೌಕರ್ಯ ಕಾರ್ಯಗಳನ್ನೂ ಕೈಗೆತ್ತಿಕೊಳ್ಳಲಾಗುತ್ತಿಲ್ಲ, ಇದು ಮತದಾರರಲ್ಲಿ ಬೇಸರ ಮೂಡಿಸಿದೆ.

ಅಧಿಕಾರಕ್ಕೆ ಬರುತ್ತಿದ್ದಂತೆ ವರ್ಗಾವರ್ಗಿ ದಂಧೆಯೂ ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಇದೆಲ್ಲದಕ್ಕೂ ಮಿಗಿಲಾಗಿ ಮತ್ತೆ ರಾಷ್ಟ್ರದಲ್ಲಿ ಸದೃಢ ಸರ್ಕಾರ ತರಲು ನರೇಂದ್ರ ಮೋದಿ ಅವರನ್ನೇ ಬೆಂಬಲಿಸಬೇಕೆಂಬ ಹುಮ್ಮಸ್ಸು ಮತದಾರರಲ್ಲಿ ಕಂಡುಬರುತ್ತಿದೆ.

ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಅಧಿಕಾರ ಇಲ್ಲದೇ ಮನೆಯಲ್ಲಿರುವ ಬಿಜೆಪಿ ನಾಯಕರು ಲೋಕಸಭಾ ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದಾರೆ.

# ಸೋಲು - ಗೆಲುವು ಮುಖ್ಯವಲ್ಲ, ಸ್ಪರ್ಧೆ ಮಾಡುವುದು ಮುಖ್ಯ




**ಸೋಮೇಶ್ವರ ವಿದ್ಯಾಲಯದ ಕ್ರೀಡಾಕೂಟದಲ್ಲಿ ದಕ್ಷಿಣ ಸಂಚಾರಿ ಪೊಲೀಸ್ ಠಾಣೆ ಪಿಎಸ್‌ಐ ಶ್ರೀಮತಿ ಕೆ.ಎಂ. ಶೈಲಜ**

ದಾವಣಗೆರೆ, ಜ.2- ಕ್ರೀಡೆಯಿಂದ ಮಾನಸಿಕ, ದೈಹಿಕವಾಗಿ ಸಾಮರ್ಥ್ಯ ಹೆಚ್ಚಾಗುತ್ತದೆ, ಜೊತೆಯಲ್ಲಿ ಆರೋಗ್ಯ ಕೂಡ ಸದೃಢವಾಗಿರುತ್ತದೆ ಎಂದು ದಕ್ಷಿಣ ಸಂಚಾರಿ ಪೊಲೀಸ್ ಠಾಣೆ ಪಿಎಸ್‌ಐ ಶ್ರೀಮತಿ ಕೆ.ಎಂ. ಶೈಲಜ ತಿಳಿಸಿದರು.

ನಗರದ ಸೋಮೇಶ್ವರ ವಿದ್ಯಾಲಯದಲ್ಲಿ ವಾರ್ಷಿಕ ಕ್ರೀಡಾಕೂಟದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ವೇಳೆ ಈ ವಿಷಯ ತಿಳಿಸಿದರು.

ಪಠ್ಯದ ಜೊತೆ ಕ್ರೀಡೆಯಲ್ಲೂ ವಿದ್ಯಾರ್ಥಿಗಳು ಭಾಗವಹಿಸಬೇಕು. ಸೋಲು-ಗೆಲುವು ಸಾಮಾನ್ಯ, ಆದರೆ ಸ್ಪರ್ಧೆ ಮಾಡುವುದು ಮುಖ್ಯ ಎಂದರು. ಉತ್ತಮ ಕ್ರೀಡಾಪಟು ಆಗುವುದರ ಜೊತೆ ನಿತ್ಯ ಜೀವನದಲ್ಲಿ ನಾವು ಸಾಮಾನ್ಯ ನಿಯಮಗಳನ್ನು ಪಾಲಿಸಬೇಕು. ಅದರಲ್ಲೂ ಸಂಚಾರಿ ನಿಯಮಗಳನ್ನು ವಿದ್ಯಾರ್ಥಿಗಳು ಪಾಲಿಸಬೇಕು. ರಸ್ತೆಯಲ್ಲಿ ಹೋಗುವಾಗ ವಿದ್ಯಾರ್ಥಿಗಳು ನಿಯಮ ಪಾಲಿಸಿದರೆ ಆಗುವ ಅನಾಹುತ ತಪ್ಪಿಸಬಹುದು, ಹೆಲ್ಮೆಟ್ ಬಳಸಬೇಕು, ಸಿಗ್ನಲ್‌ಗಳನ್ನು ನೋಡಿ ಸಂಚರಿಸಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್ ಅವರು ಶಾಟ್ ಪುಟ್ ಕ್ರೀಡೆಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ನಮ್ಮ ವಿದ್ಯಾಲಯದಲ್ಲಿ ಮಕ್ಕಳಿಗೆ ಕೇವಲ ಪಾಠ ಮಾತ್ರವಲ್ಲ, ಪಠ್ಯ ಜೊತೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಸ್ಕಾರ, ಸಂಸ್ಕೃತಿ ಬಿತ್ತುವ ಎಲ್ಲಾ ಚಟುವಟಿಕೆಗಳನ್ನೂ ಮಾಡಲಾಗುತ್ತಿದೆ. ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳಿಸಲು ನಮ್ಮ ಸಂಸ್ಥೆ ಎಲ್ಲಾ ರೀತಿ ಸಹಕಾರ, ಪ್ರೋತ್ಸಾಹ ನೀಡುತ್ತಿದೆ ಎಂದು ತಿಳಿಸಿದದರು.

ಈ ವೇಳೆ ಪೊಲೀಸ್ ಇಲಾಖೆಯ ಅರುಣ್ ಕುಮಾರ್, ಶ್ರೀ ಸೋಮೇಶ್ವರ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ಪ್ರಭಾವತಿ, ಆಡಳಿತಾಧಿಕಾರಿ ಹರೀಶ್ ಬಾಬು ಮತ್ತು ಇತರರು ಉಪಸ್ಥಿತರಿದ್ದರು.

# ತಪ್ಪು ಮಾಡಿದವರ ಸುಮ್ಮನೆ ಬಿಡಬೇಕೇ?

**ಕರಸೇವಕರ ಬಂಧನದಲ್ಲಿ ದ್ವೇಷ ರಾಜಕಾರಣ ಮಾಡಿಲ್ಲ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ**

ಬೆಂಗಳೂರು, ಜ. 2 - ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನ ವಿಷಯದಲ್ಲಿ ಯಾವುದೇ ದ್ವೇಷದ ರಾಜಕಾರಣ ಮಾಡುವುದಾಗಲೀ, ನಿರಪರಾಧಿಗಳನ್ನು ಬಂಧಿಸುವ ಕೆಲಸವಾಗಲೀ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಪ್ಪು ಮಾಡಿದವರಿಗೆ ಏನು ಮಾಡಬೇಕು? ಸುಮ್ಮನೆ ಬಿಟ್ಟು ಬಿಡಬೇಕೇ? ಹಳೇ ಪ್ರಕರಣಗಳನ್ನು ವಿಲೇವಾರಿ ಮಾಡಲು ಸೂಚಿಸಲಾಗಿದೆ. ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ. ನ್ಯಾಯಾಲಯದ ಸೂಚನೆ ಇದ್ದರೆ ಅದರಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ರಾಮಮಂದಿರ ಉದ್ಘಾಟನೆಗೆ ಯಾರಿಗೆ ಆಹ್ವಾನ ಹೋಗಿದೆ, ಬಿಟ್ಟಿದೆ, ಗೊತ್ತಿಲ್ಲ. ಆಹ್ವಾನ ಕೊಟ್ಟವರು ಹೋಗುತ್ತಾರೆ, ಇಲ್ಲದವರು ಇಲ್ಲ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಅತಿಥಿ ಉಪನ್ಯಾಸಕರು ಖಾಯಂ ಮಾಡಿ ಎಂಬ ಬೇಡಿಕೆ ಇಟ್ಟಿದ್ದಾರೆ, ಖಾಯಂ ಮಾಡುವುದು ಕಷ್ಟದ ಕೆಲಸ. ಪಾದಯಾತ್ರೆ ಬಗ್ಗೆ ಅವರೊಂದಿಗೆ ಮಾತನಾಡಿದ್ದರೂ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಬರ ಪರಿಹಾರ ನೀಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು ಬೆಳೆ ನಷ್ಟಕ್ಕೆ ತಾತ್ಕಾಲಿಕ ಪರಿಹಾರವಾಗಿ 2,000 ರೂ.ಗಳನ್ನು ನೀಡಲಾಗುತ್ತಿದೆ, ಆಧಾರ್ ಲಿಂಕ್ ನಂತರ ರೈತರಿಗೆ ಮೊತ್ತ ತಲುಪಲಿದೆ ಎಂದರು.

# ಮಳೆಯಾಶ್ರಿತ ಪ್ರದೇಶದಲ್ಲಿ ಸಮಗ್ರ ಕೃಷಿ ಅನುಸರಿಸಲು ಕರೆ

**ರಾಮತೀರ್ಥ ಗ್ರಾಮದಲ್ಲಿನ ತೊಗರಿ ಬೆಳೆ ಕ್ಷೇತ್ರೋತ್ಸವದಲ್ಲಿ ವಿಜ್ಞಾನಿ ಮಲ್ಲಿಕಾರ್ಜುನ್**

ಹರಿಹರ, ಜ.2- ಹಂಗಾಮು ಬೆಳೆಗಳನ್ನು ಸೂಕ್ತ ತಾಂತ್ರಿಕತೆಗಳಿಂದ ಬೆಳೆಯುವುದರಿಂದ ರೈತರು ಅಧಿಕ ಲಾಭ ಪಡೆಯಬಹುದು ಎಂದು ತರಳಬಾಳು ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿ ಮಲ್ಲಿಕಾರ್ಜುನ್ ಸಲಹೆ ನೀಡಿದರು.

ತಾಲ್ಲೂಕಿನ ರಾಮತೀರ್ಥ ಗ್ರಾಮದ ರೈತರ ತಾಕಿನಲ್ಲಿ ಕೃಷಿ ಇಲಾಖೆ ವತಿಯಿಂದ ತೊಗರಿ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿ, ಮಳೆ ಆಶ್ರಿತ ಪ್ರದೇಶದಲ್ಲಿ ಸಮಗ್ರ ಕೃಷಿ ಅನುಸರಿಸಿ ಅಧಿಕ ಲಾಭ ಪಡೆಯುವಂತೆ ತಿಳಿಸಿದರು.



ಸಹಾಯಕ ಕೃಷಿ ನಿರ್ದೇಶಕ ನಾರನಗೌಡ ಎ. ಇವರು ಮಾತನಾಡುತ್ತಾ ರೈತರು ಬೆಳೆ ಪರಿವರ್ತನೆ ಹಾಗೂ ಬೆಳೆ ವೈವಿಧ್ಯತೆಗೆ ಗಮನ ಹರಿಸಬೇಕು. ಬೆಳೆ ಪರಿವರ್ತನೆಯಿಂದ ಮಣ್ಣಿನ ಫಲವತ್ತತೆಯನ್ನು ಕಾಪಾಡುವುದರ ಜೊತೆಗೆ ಕೆಲವು ಕಳೆಗಳನ್ನು ಸುಲಭವಾಗಿ ನಿಯಂತ್ರಿಸಬಹುದು ಎಂದು ತಿಳಿಸಿದರು. ರೈತರು ಪ್ರಮುಖವಾಗಿ ಮೆಕ್ಕೆಜೋಳದ ಬೆಳೆಯಲ್ಲಿ ಅಕ್ಕಡಿ ಬೆಳೆಯಾಗಿ ತೊಗರಿ ಬೆಳೆಯಲು ಕರೆ ನೀಡಿದರು.

ಕೃಷಿ ಅಧಿಕಾರಿ ವಿಕಾಸ್ ಅವರು ರೈತರಿಗೆ ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಯೋಗೇಶ್‌ಗೌಡ ಮತ್ತು ಇತರರು ಭಾಗವಹಿಸಿದ್ದರು.

# ರುದ್ರನಕಟ್ಟೆಯಲ್ಲಿ ಇಂದು ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನೆ

ದಾವಣಗೆರೆ,ಜ. 2- ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಗ್ರಾಮ ಘಟಕ, ಜಿಲ್ಲಾ ಘಟಕ ಹಾಗೂ ರುದ್ರನಕಟ್ಟೆ ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 3 ರ ಬುಧವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕಿನ ರುದ್ರನಕಟ್ಟೆ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಉಪಾಧ್ಯಕ್ಷ ಎಸ್.ಎಸ್. ಗಿರೀಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೊಸದುರ್ಗದ ಕನಕ ಗುರುಪೀಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ಚಿತ್ರದುರ್ಗ ಯಾದವ ಮಹಾಸಂಸ್ಥಾನದ ಶ್ರೀ ಕೃಷ್ಣ ಯಾದವಾ ನಂದ ಸ್ವಾಮೀಜಿ, ಮಡಿವಾಳ ಮಾಚಿದೇವ ಮಹಾಸಂಸ್ಥಾನ ಮಠದ ಶ್ರೀ ಬಸವ ಮಡಿವಾಳ ಮಾಚಿದೇವ ಸ್ವಾಮೀಜಿ , ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಸೇವಾಲಾಲ್ ಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಮಾಜಿ ಸಚಿವ ಹೆಚ್.ಎಂ. ರೇವಣ್ಣ, ಡಾ. ಯತೀಂದ್ರ ಸಿದ್ಧರಾಮಯ್ಯ, ಸಂಘಟನೆಯ ರಾಜ್ಯಾಧ್ಯಕ್ಷ ರಾಜಶೇಖರ ದೊಡ್ಡಣ್ಣ ಪುತ್ಥಳಿ ಅನಾವರಣ ಕಾರ್ಯವನ್ನು ನೆರವೇರಿಸಲಿದ್ದಾರೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಸಿಎಂ ಆಪ್ತ ಸಲಹೆಗಾರ ಕೆ.ವಿ. ಪ್ರಭಾಕರ್, ಕೊಪ್ಪಳ ಶಾಸಕ ರಾಘವೇಂದ್ರ ಬಿ. ಹಿಟ್ನಾಳ್, ಕುಷ್ಟಗಿ ಶಾಸಕ ದೊಡ್ಡನ ಗೌಡ ಹೆಚ್. ಪಾಟೀಲ್, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಅಬ್ದುಲ್ ಜಬ್ಬಾರ್, ಕೆ.ಎಂ. ರಾಮಚಂದ್ರಪ್ಪ, ಮೆಹಬೂಬ್ ಪಾಷಾ, ಜೈರಾಮ್, ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್ ಕುಮಾರ್, ಹೆಚ್.ಬಿ. ಮಂಜಪ್ಪ, ಶಿವಕುಮಾರ್ ಒಡೆ ಯರ್, ಎಸ್. ಎಸ್. ಗಿರೀಶ್, ಪ್ರಸನ್ನ ಕುಮಾರ್, ದೀಪಕ್ ಬಿ. ಜೋಗಪ್ಪ ನವರ್, ಮನೋಜ್ ಮತ್ತಿತರರಿದ್ದರು. ಸಮಾಜದ ಗುರುಗಳಾದ ಹಾಲಯ್ಯ ಒಡೆಯರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಬಸವರಾಜ್, ಹನುಮಂತಪ್ಪ, ಶ್ರೀನಿವಾಸ್, ದೀಪಕ್, ಮಹಾಂತೇಶ್, ಗಣೇಶ್, ಸಂಗನ ಬಸಪ್ಪ, ಮಹಾಂತೇಶ್ ಮತ್ತಿತರರಿದ್ದರು.

# ಬೀದಿ ದೀಪ ಕಾಮಗಾರಿ ಉದ್ಘಾಟಿಸಿದ ಎಸ್ಸೆಸ್



ದಾವಣಗೆರೆ, ಜ.2- ಸ್ಥಳೀಯ ದೊಡ್ಡಬೂದಿಹಾಳ್ ರಸ್ತೆಯಲ್ಲಿ ನೂತನವಾಗಿ ಅಳವಡಿಸಿರುವ ಅಕ್ಟೋಗನಲ್ ಕಂಬ ಮತ್ತು ಎಲ್.ಇ.ಡಿ ಬೀದಿ ದೀಪ ಕಾಮಗಾರಿಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಆಯುಕ್ತರಾದ ಶ್ರೀಮತಿ ರೇಣುಕಾ, ಪಾಲಿಕೆ ಸದಸ್ಯರಾದ ಕಬೀರ್ ಖಾನ್, ರಹೀಮ್ ಸಾಬ್, ಶ್ರೀಮತಿ ಸುಧಾ ಮಂಜುನಾಥ್, ಕಾಂಗ್ರೆಸ್ ಮುಖಂಡರುಗಳಾದ ಸಾಗರ್, ಪ್ರವೀಣ್ ಕುಮಾರ್, ರಾಕೇಶ್, ಹಜರತ್ ಅಲಿ, ಬುತ್ತಿ ಹುಸೇನ್, ಕಾರ್ಯಪಾಲಕ ಅಭಿಯಂತರ ಉದಯಕುಮಾರ್ ಉಪಸ್ಥಿತರಿದ್ದರು

# ಮಂತ್ರಾಕ್ಷತೆ ಎಂದು ಹಂಚುತ್ತಿದ್ದಾರೆ

**ರಾಮ ದೇವಸ್ಥಾನದ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡದಿರುವುದು ರಾಜ್ಯದ ಜನತೆಗೆ ಮಾಡಿರುವ ಅವಮಾನ.**

**(1ನೇ ಪುಟದಿಂದ)** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿ ಕಡೆಗೆ, ರೈತರ ಬಗ್ಗೆ ಚಿಂತನೆ ನಡೆಸಬೇಕಿತ್ತು. ಆದರೆ, ಕೇವಲ ಅಧ್ಯಾತ್ಮದ ಕಡೆ ಗಮನ ಹರಿಸಲಾಗುತ್ತಿದೆ ಎಂದವರು ಆಕ್ಷೇಪಿಸಿದರು.

ರಾಜ್ಯದಲ್ಲಿ ಬರ ಇದೆ. ಕೇಂದ್ರದಲ್ಲಿ ಮನಮೋಹನ್ ಸಿಂಗ್ ಸರ್ಕಾರ ಇದ್ದಾಗ ಸಾಲ ಮನ್ನಾ ಮಾಡಲಾಗಿತ್ತು. ಈ ಬಾರಿಯೂ ದೇಶಾದ್ಯಂತ ಸಾಲ ಮನ್ನಾ ಮಾಡಲಿ. ಕನಿಷ್ಠ ಬರ ಇರುವ ಕರ್ನಾಟಕದಲ್ಲಾದರೂ ಸಾಲ ಮನ್ನಾ ಮಾಡಲಿ ಎಂದು ಆಗ್ರಹಿಸಿದರು.

ರಾಜ್ಯಕ್ಕೆ ಕೇಂದ್ರದ ತಂಡಗಳು ಬಂದು ಅಧ್ಯಯನ ಮಾಡಿ ಹೋಗಿವೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಾಯಕೊಂಡಕ್ಕೆ ಬಂದು ಬರ ಪರಿಸ್ಥಿತಿ ವೀಕ್ಷಣೆ ಮಾಡಿದ್ದಾರೆ. ಪ್ರಧಾನ ಮಂತ್ರಿ ಹಾಗೂ ಕೇಂದ್ರ ಗೃಹ ಸಚಿವರ ಬಳಿ ಮನವಿ ಮಾಡಿ ಪರಿಹಾರ ಬಿಡುಗಡೆ ಮಾಡಿಸಲಿ ಎಂದವರು ಒತ್ತಾಯಿಸಿದರು. ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ಬರ ಪರಿಹಾರಕ್ಕೆ ಕೇಂದ್ರವೂ ನೆರವಾಗಿತ್ತು. ಈಗ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ ಎಂದು ಆಕ್ಷೇಪಿಸಿದರು.




## ಹರಾಜು ಪ್ರಕ್ರಿಯೆ

ದೇವನಗರಿ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯಿಂದ, ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಮಣಿ ಸರ್ಕಾರ್ ಇವರ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ಕಬಡ್ಡಿ ಪ್ರೀಮಿಯರ್ ಲೀಗ್-24 ಪಂದ್ಯಾವಳಿಯನ್ನು ಸಂಘಟಿಸಲು ತೀರ್ಮಾನಿಸಲಾಗಿದೆ. ದಿನಾಂಕ 7-1-2024 ರ ಬೆಳಿಗ್ಗೆ 10 ಗಂಟೆಗೆ 8 ತಂಡಗಳ ಹರಾಜು ಪ್ರಕ್ರಿಯೆ ಜಿಲ್ಲಾ ಕ್ರೀಡಾಂಗಣ ದಾವಣಗೆರೆಯಲ್ಲಿ ನಡೆಯಲಿದೆ. ಈ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಚಿಸುವವರು ಹೆಚ್ಚಿನ ಮಾಹಿತಿಗಾಗಿ

**9535926261, 6366673090, 9743758108,7795698454 ಸಂಪರ್ಕಿಸಿ.**

## ಖಾಲಿ ನಿವೇಶನದ ಕ್ರಯ ಪತ್ರ ಕಳೆದಿರುವ ಬಗ್ಗೆ ಪ್ರಕಟಣೆ

ದಿನಾಂಕ 22.12.2023ರ ರಾತ್ರಿ 7.30 ಗಂಟೆ ಸುಮಾರು ಬಸಾಪುರ ರಸ್ತೆಯ ಕಡೆಯಿಂದ ಅಣ್ಣಾನಗರಕ್ಕೆ ನಮ್ಮ ಮನೆಗೆ ಹೋಗುವ ಮಾರ್ಗದಲ್ಲಿ ಇರುವ ಬನ್ನಿ ಮಹಾಂಕಾಳವು ದೇವಸ್ಥಾನದ ಕ್ರಾಸ್‌ನಲ್ಲಿ ಆರ್.ಜಿ ಧನೇಶ್ ಕುಮಾರ್ ಬಿನ್ ಆರ್.ಜಿ ಜಯದೇವಪ್ಪ ಇವರು ಸಿ.ಜಿ ಉಮೇಶ್ ಬಿನ್ ಸಿ. ಗುರುಸಿದ್ದಪ್ಪ ಇವರಿಗೆ ಬರೆದುಕೊಟ್ಟಿರುವ ಖಾಲಿ ನಿವೇಶನಗಳ ಕ್ರಯಪತ್ರ ಸಂಖ್ಯೆ : DVG-1-06756-2016-17, C.D No. DVGD426, Date : 20-07-2016 ಮತ್ತು ದಾವಣಗೆರೆ ಮಹಾನಗರ ಪಾಲಿಕೆಯ ಆಸ್ತಿ ಹಕ್ಕು ವರ್ಗಾವಣೆ ಮಾಡಿದ ಬಗ್ಗೆ ಹಿಂಬರಹ ಮೂಲ ಪತ್ರ ಸಂಖ್ಯೆ : ದಾ.ಮ.ಪಾ.ಕಂ. ಶಾಖೆ/ಡಿ.ಸಿ.ಬಿ.ಸಿ.ಆರ್. 119/2016-17, ದಿನಾಂಕ:28-10-2016 ಈ ಮೇಲಿನ ಎರಡು ಮೂಲ ದಾಖಲಾತಿಗಳು ಪ್ಲಾಸ್ಟಿಕ್ ಕವರ್- ಸಮೇತ ಕಳೆದು ಹೋಗಿರುತ್ತದೆ. ಯಾರಿಗಾದರೂ ಮೇಲಿನ ದಾಖಲೆಗಳು ಸಿಕ್ಕಲ್ಲಿ ಈ ಕೆಳಕಂಡ ವಿಳಾಸಕ್ಕೆ ತಲುಪಿಸಿದ್ದಲ್ಲಿ ಅವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

**ಷೆಡ್ಯೂಲ್**

ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸ್ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ಮಹಾನಗರ ಪಾಲಿಕೆಗೆ ಸೇರಿದ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಆನೆಕೊಂಡ ಗ್ರಾಮದ ಖಾನೇಷುಮಾರಿ ನಂ.99 ರಲ್ಲಿ ವಿಂಗಡಿಸಿರುವ ಸೈಟುಗಳ ಪೈಕಿ ಸೈಟ್ ನಂ.22 (ಇಪ್ಪತ್ತೆರಡು) ಅಳತೆ : 29x100 ಅಡಿಉಳ್ಳ ಜಾಗದ ಪೈಕಿ ದಕ್ಷಿಣ ಭಾಗದ ಕಡೆಯ ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ.432/22, ಇದರ ಅಳತೆ : ಪೂರ್ವ-ಪಶ್ಚಿಮ : 29 ಅಡಿ ಉತ್ತರ-ದಕ್ಷಿಣ: 50 ಅಡಿ (29x50 ಅಡಿ) ಇದ್ದು. ಸದರಿ ನಿವೇಶನಕ್ಕೆ **ಚಕ್ಕುಬಂದಿ: ಪೂರ್ವಕ್ಕೆ:** ಸೈಟ್ ನಂ.23, **ಪಶ್ಚಿಮಕ್ಕೆ:** ಸೈಟ್ ನಂ.21. **ಉತ್ತರಕ್ಕೆ:** ಇದೇ ಸೈಟ್ ನಂಬರಿನಲ್ಲಿ ಈ ಹಿಂದೆ ಎಂ.ಬಿ ಶಂಭುಲಿಂಗಯ್ಯ ಇವರಿಗೆ ಮಾರಾಟ ಮಾಡಿರುವ ಡೋರ್ ನಂ.432/22ಎ, ಅಳತೆ : 29x50 ಅಡಿಉಳ್ಳ ನಿವೇಶನ, **ದಕ್ಷಿಣಕ್ಕೆ:** 50 ಅಡಿ ಅಗಲದ ರಸ್ತೆ, ಈ ಮಧ್ಯದ ಸೊತ್ತು.

ವಿಳಾಸ: **ವೈ.ಎಸ್ ಕೊಟ್ರೇಶಿ ಬಿನ್ ಶೇಖರಪ್ಪ**
ವಾಸ : ಮನೆ ನಂ. 600/5, 1ನೇ ಮೇನ್, 1ನೇ ಕ್ರಾಸ್, ಅಣ್ಣಾನಗರ, ಬಸಾಪುರ ರಸ್ತೆ. ದಾವಣಗೆರೆ. **ಮೊ. ನಂ. : 9964379602**

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ವಾಸದ ಮನೆಯನ್ನು ನನ್ನ ಕಕ್ಷಿಗಾರರು **ಶ್ರೀ ಮಂಜುನಾಥ ಎಸ್. ಬಿನ್ ಸಂತೋಜಿರಾವ್ ಸಿ.ಕೆ., ಡೋರ್ ನಂ.3876/6, ಅಕಿಲಂ, 13ನೇ ಮೇನ್, 7ನೇ ಕ್ರಾಸ್, ಎಕ್ಸ್‌ಟೆಂಡೆಡ್ ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ** ಇವರಿಂದ ಖರೀದಿಸಲು ಇಚ್ಚಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀ ಮಂಜುನಾಥ ಎಸ್. ಬಿನ್: ಸಂತೋಜಿರಾವ್ ಸಿ.ಕೆ. ಡೋರ್ ನಂ.3876/6, ಅಕಿಲಂ, 13ನೇ ಮೇನ್, 7ನೇ ಕ್ರಾಸ್, ಎಕ್ಸ್‌ಟೆಂಡೆಡ್ ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ** ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ **15 ದಿವಸಗಳ ಒಳಗಾಗಿ** ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಸದರಿ **15 ದಿವಸಗಳ ಅವಧಿ** ಮೀರಿ ಬರುವ ಯಾವುದೇ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ **15 ದಿವಸಗಳ ಅವಧಿ** ನಂತರ ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀ ಮಂಜುನಾಥ ಎಸ್. ಬಿನ್: ಸಂತೋಜಿರಾವ್ ಸಿ.ಕೆ. ಡೋರ್ ನಂ.3876/6, ಅಕಿಲಂ, 13ನೇ ಮೇನ್, 7ನೇ ಕ್ರಾಸ್, ಎಕ್ಸ್‌ಟೆಂಡೆಡ್ ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ** ಇವರಿಂದ ಷೆಡ್ಯೂಲ್ ವಾಸದ ಮನೆ ಸ್ಥಿರ ಸೊತ್ತನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆ ವಗೈರೆಗಳು ಯಾವುದೂ ನನ್ನ ಕಕ್ಷಿಗಾರರನ್ನು ಎಳ್ಳಷ್ಟೂ ಪ್ರತಿಬಂಧಿಸುವುದಿಲ್ಲ. ಹಾಗೂ ನನ್ನ ಕಕ್ಷಿಗಾರರು ಸದರಿ **ಶ್ರೀ ಮಂಜುನಾಥ ಎಸ್. ಬಿನ್: ಸಂತೋಜಿರಾವ್ ಸಿ.ಕೆ. ಡೋರ್ ನಂ.3876/6, ಅಕಿಲಂ, 13ನೇ ಮೇನ್, 7ನೇ ಕ್ರಾಸ್, ಎಕ್ಸ್‌ಟೆಂಡೆಡ್ ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ** ಇವರಿಂದ ಪಡೆದುಕೊಳ್ಳುವ ಶುದ್ದ ಕ್ರಯಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ. ತಿಳಿಯುವುದು.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರಿ.ಸರ್ವೆ ನಂ.93ರಲ್ಲಿ ಬರತಕ್ಕ ಪ್ಲಾಟ್ ನಂ.22 ಮತ್ತು 23 ಇವುಗಳ ಒಟ್ಟು ಅಳತೆ ಪೂರ್ವ-ಪಶ್ಚಿಮ 80 ಅಡಿ, ಉತ್ತರ-ದಕ್ಷಿಣ 69 ಅಡಿ, ವಿಸ್ತೀರ್ಣ 5 ಗುಂಟೆ ಸೊತ್ತು ರೀ **ಸರ್ವೆ ನಂ..93/2ಹೆಚ್** ಆಗಿದ್ದು ಸದರಿ ಸೊತ್ತನ್ನು ವಾಸೋಪಯೋಗಕ್ಕಾಗಿ ಚಿತ್ರದುರ್ಗ ವಿಶೇಷ ಜಿಲ್ಲಾಧಿಕಾರಿಗಳವರಿಂದ ದಿನಾಂಕ: 24-2-1987 ರಂದು ಆದೇಶ ಸಂಖ್ಯೆ:ಎಎಲ್‌ಎನ್/ಎಸ್‌ಆರ್ 116/86-87 ರ ಪ್ರಕಾರ ಅಲಿನೇಷನ್ ಆಗಿದ್ದು, ನಂತರ ಸದ್ರಿ 0-05 ಗುಂಟೆ ಪ್ರದೇಶದಲ್ಲಿನ ಸೈಟ್ ನಂ.22 ಮತ್ತು 23 ಈ ಎರಡೂ ಸೈಟುಗಳ ಒಟ್ಟು ಅಳತೆ: **80 ಅಡಿ X 69 ಅಡಿ ವುಳ್ಳದ್ದನ್ನು** ತಲಾ ಅಳತೆ: 40 X 54 ಅಡಿಯಂತೆ ಸದ್ರಿ ಸೈಟುಗಳನ್ನು ನಗರ ಯೋಜನಾ ಪ್ರಾಧಿಕಾರ ಕಛೇರಿ, ದಾವಣಗೆರೆ ಇವರಿಂದ ದಿನಾಂಕ: 23-6-1987 ರ ಸಂಖ್ಯೆ: ದಾ- ಹ.ನಯೋಪ್ರಾ.418/86-87 ರ ಆದೇಶದ ಪ್ರಕಾರ ಪ್ಲಾನ್‌ನ ವಿನ್ಯಾಸ ಮಂಜೂರಾಗಿದ್ದು, ನಂತರ ಸದ್ರಿ ಎರಡು ಸೈಟುಗಳಿಗೆ ದಾವಣಗೆರೆ ನಗರಸಭೆಯಿಂದ ಡೋರ್ ನಂಬರ್ ಪಡೆದು ಖಾತೆ ಸಹ ನಮೂದಾಗಿರುವ ಸೈಟುಗಳು ಹಾಲಿ ದಾವಣಗೆರೆ ಮಹಾನಗರ ಪಾಲಿಕೆಯ ದಾವಣಗೆರೆ ಸಿಟಿ ಎಂಸಿಸಿ ಎಕ್ಸ್‌ಟೆಂಡೆಡ್ 'ಬಿ' ಬ್ಲಾಕ್‌ನಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟು ನಂ.22 ಹಾಲಿ ದಾವಣಗೆರೆ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ.3876/6, ಖಾತೆಯಲ್ಲಿ ಹಾಗೂ ಅನುಮೋದನೆಯಲ್ಲಿ ಕಂಡಂತೆ ಅಳತೆ 40 X 54 ಅಡಿ ಇದ್ದು, ಸ್ಥಳದಲ್ಲಿ ಕಂಡಂತೆ ಹಾಗೂ ಪಶ್ಚಿಮದಲ್ಲಿರುವ ಸೊತ್ತಿನ ಕಾಂಪೌಂಡ್ ಜಾಗದ ಅರ್ಧ ಭಾಗದ ಹಕ್ಕು ಮಾತ್ರ ಸೇರಿ ಅಳತೆ: ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 48.7 ಅಡಿ (40 X 48.7) ಅಡಿಯುಳ್ಳ ಖಾಲಿ ನಿವೇಶನದಲ್ಲಿ ಈ ಹಿಂದೆ 2014 ರಲ್ಲಿ ಕಟ್ಟಡ ಪರವಾನಗಿ ಹಾಗೂ ಮಂಜೂರಾದ ನೀಲಿ ನಕ್ಷೆ ಪಡೆದು ಕಟ್ಟಿಸಿರುವ ಆರ್‌ಸಿಸಿ ರೂಫಿಂಗ್ ವುಳ್ಳ ಡೂಪ್ಲೆಕ್ಸ್ ವಾಸದ ಮನೆ ಹಾಗೂ ಸದರಿ ಮನೆಗೆ ಚಕ್ಕುಬಂದಿ: ಪೂರ್ವಕ್ಕೆ - ಸೈಟು ನಂ.23, ಡೋರ್ ನಂ.3876/7ರ ಉಳಿದ ಸೊತ್ತು, ಪಶ್ಚಿಮ - ಸೈಟು ನಂ.21, ಡೋರ್ ನಂ.5453/21ರ ಉಳಿದ ಸೊತ್ತು, ಉತ್ತರ - ರಸ್ತೆ, ದಕ್ಷಿಣ - ಸೈಟು ನಂ.27, ಡೋರ್ ನಂ.4421/27ರ ಸೊತ್ತು, **(ಈ ಮಧ್ಯದ ಒಂದು ವಾಸದ ಮನೆಯ ಸೊತ್ತು)**

**ಮಲ್ಲಿಕಾರ್ಜುನ ಕಣವಿ,** ಬಿ.ಎ. ಎಲ್‌ಎಲ್.ಎಂ.
ವಕೀಲರು, ನಂ.5 & 6, 1ನೇ ಅಂತಸ್ತು, ದಾವಣಗೆರೆ
ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ
ಇಂಟರ್‌ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006.

**ದಾವಣಗೆರೆ**
**ದಿನಾಂಕ : 02-01-2024**

## ಸಾರ್ವಜನಿಕ ಪ್ರಕಟಣೆ

**ಡಿ.ನಾಗರಾಜ @ ನಾಗರಾಜಪ್ಪ, ಬಿನ್ ಡಿ.ಮಹದೇವಪ್ಪ, ವಯಸ್ಸು ಸುಮಾರು 65 ವರ್ಷ, ವಾಸ: ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ,** ಜೊತೆಗೆ ಇನ್ನು 16 ಜನ ಸೇರಿ ದಾವಣಗೆರೆಯ ಹಿರಿಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ನಂ. ಒ.ಎಸ್.56/2011 ಎಂಬ ದಾವೆಯನ್ನು ಸಲ್ಲಿಸಿ, ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ರಿ.ಸರ್ವೆ.ನಂ.23ರಲ್ಲಿ 09 ಎಕರೆ, 14 ಗುಂಟೆ, ರಿ.ಸರ್ವೆ ನಂ.26ರಲ್ಲಿ 10 ಎಕರೆ, 01 ಗುಂಟೆ, ರಿ.ಸರ್ವೆ. ನಂ. 109ರಲ್ಲಿ 22 ಎಕರೆ, 29 ಗುಂಟೆ, ರಿ.ಸರ್ವೆ.ನಂ.110 ರಲ್ಲಿ 02 ಎಕರೆ, 12 ಗುಂಟೆ, ರಿ.ಸರ್ವೆ.ನಂ. 111ರಲ್ಲಿ 2 ಎಕರೆ, 34 ಗುಂಟೆ, ರಿ.ಸರ್ವೆ.ನಂ. 112ರಲ್ಲಿ 6 ಎಕರೆ, 21 ಗುಂಟೆ. ರಿ.ಸರ್ವೆ.ನಂ. 113ರಲ್ಲಿ 01 ಎಕರೆ, 19 ಗುಂಟೆ, ರಿ.ಸರ್ವೆ. ನಂ. 129/1ರಲ್ಲಿ 04 ಎಕರೆ, 23 ಗುಂಟೆ, ರಿ.ಸರ್ವೆ. ನಂ. 187ರಲ್ಲಿ 12 ಎಕರೆ, 03 ಗುಂಟೆ, ರಿ.ಸರ್ವೆ.ನಂ. 206/1 ಹಾಗೂ 206/3ರಲ್ಲಿ 09 ಎಕರೆ, 22 ಗುಂಟೆ, ಉಳ್ಳ ಜಮೀನುಗಳು.

ಈ ಕೆಳಕಂಡ ಖಾನುಶುಮರಿ ನಂಬರ್‌ನಲ್ಲಿ ಕಂಡ ಆಸ್ತಿಗಳು.

1) ಖಾನುಷುಮಾರಿ ನಂ.11/1ರಲ್ಲಿ ಉಳ್ಳ ಖಣ 31x30x38/2 ಅಡಿಗಳು.
2) ಖಾನುಷುಮಾರಿ ನಂ.11/2ರಲ್ಲಿ ಉಳ್ಳ ಖಣ 132x112 ಅಡಿಗಳು ಹಾಗೂ 27x55 ಅಡಿಗಳು.
3) ಖಾನುಷುಮಾರಿ ನಂ.11/2ರಲ್ಲಿ ಉಳ್ಳ ಖಣ 84x39+55/2 ಅಡಿಗಳು.
4) ಆಸ್ತಿ ನಂ. ಕೆ.ಎಸ್. 215 ಉಳ್ಳ 132x56 ಅಡಿಗಳು.
5) ಆಸ್ತಿ ನಂ. ಕೆ.ಎಸ್. 09ರಲ್ಲಿ 99x148 ಅಡಿಗಳು.

ಈ ಎಲ್ಲಾ ಆಸ್ತಿಗಳು ದೊಡ್ಡಬಾತಿ ಗ್ರಾಮದಲ್ಲಿದ್ದು, ದಿನಾಂಕ:17-10-2017ರಂದು ಮೇಲೆ ಹೇಳಿದ ಆದೇಶದಲ್ಲಿ ತೀರ್ಪಿನ ಅನ್ವಯ ಅವುಗಳಲ್ಲಿ 1/3 ಭಾಗಾಂಶಕ್ಕೆ ಈ ಪತ್ರಿಕಾ ಪ್ರಕಟಣೆ ಕೊಟ್ಟಿರುವ ಡಿ.ನಾಗರಾಜ @ ನಾಗರಾಜಪ್ಪ ಹಾಗು ಆತನ ಸಹೋದರ, ಸಹೋದರಿಯರು ಅರ್ಹರೆಂದು ತೀರ್ಮಾನವಾಗಿರುತ್ತದೆ. ಸದರಿ ತೀರ್ಮಾನವನ್ನು ವಿರೋಧಿಸಿ, ಸದರಿ ಪ್ರಕರಣದ ವಿರೋಧಿಗಳಾದ ಶ್ರೀ ಈರಪ್ಪ ಬಿನ್ ಮಹಾದೇವಪ್ಪ, ವಯಸ್ಸು ಸುಮಾರು 80 ವರ್ಷ, ಹಾಗು ಡಿ.ರೇವಣಸಿದ್ದಪ್ಪ ಬಿನಾ ಲೇಟ್ ಮಹಾದೇವಪ್ಪ, ವಯಸ್ಸು ಸುಮಾರು 72 ವರ್ಷ. ಈರ್ವರ ಕಸುಬು ವ್ಯವಸಾಯ, ವಾಸ: ದೊಡ್ಡಬಾತಿ ಗ್ರಾಮ, ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು. ಇವರು ಮೇಲ್ಕಂಡ ತೀರ್ಮಾನವನ್ನು ವಿರೋಧಿಸಿ, ದಾವಣಗೆರೆ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆರ್.ಎ.ನಂ.142/2017 ಎಂಬ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಅಪೀಲು ಪ್ರಕರಣ ಈಗಲೂ ಸಹ ಚಾಲ್ತಿಯಲ್ಲಿರುತ್ತದೆ.

ಮೇಲ್ಕಂಡ ಪ್ರಕರಣದಲ್ಲಿ ಮೇಲೆ ಹೇಳಲಾದ ಎಲ್ಲಾ ಆಸ್ತಿಗಳ ಮೇಲೆ ತೀರ್ಪು ಬಂದಿದ್ದು, ಅದನ್ನು ಮುಚ್ಚಿಟ್ಟು ಮೇಲೆ ಹೇಳಿದ ಈರಪ್ಪ ಮತ್ತು ರೇವಣಸಿದ್ದಪ್ಪ ಇವರುಗಳು. ಸದರಿ ಆಸ್ತಿಗಳಲ್ಲಿ ಕೆಲವು ಆಸ್ತಿಗಳನ್ನು ಮಾರಾಟ ಮಾಡುವ ಇರಾದೆ ಹೊಂದಿ, ಆ ರೀತಿ ಮಾರಾಟಕ್ಕೆ ತೆಗೆದುಕೊಳ್ಳುವವರ ಜೊತೆಗೆ ವ್ಯವಹರಿಸುತ್ತಿದ್ದಾರೆಂದೇ ಈ ಪತ್ರಿಕಾ ಪ್ರಕಟಣೆಯನ್ನು ಕೊಟ್ಟವರಿಗೆ ನಂಬಲರ್ಹವಾಗಿ ತಿಳಿದು ಬಂದಿದೆ.

ಆದ ಕಾರಣ ಯಾರೂ ಸಹಿತ ಮೇಲೆ ಹೇಳಿದ ಈರಪ್ಪ ಮತ್ತು ರೇವಣಸಿದ್ದಪ್ಪ ಇವರ ಮಾತನ್ನು ನಂಬಿ ಈ ಪತ್ರಿಕಾ ಪ್ರಕಟಣೆಯಲ್ಲಿ ಮೇಲೆ ಹೇಳಿದ ಆಸ್ತಿಗಳ ಸಂಬಂಧ ವ್ಯವಹರಿಸಬಾರದೆಂದು ಈ ಮೂಲಕ ಅವರಿಗೆ ಎಚ್ಚರಿಕೆ ನೀಡಲಾಗಿದೆ. ಒಂದು ವೇಳೆ ಈ ಪತ್ರಿಕಾ ಪ್ರಕಟಣೆಯು ಜಾಹೀರಾದ ನಂತರದಲ್ಲೂ ವೈಯಕ್ತಿಕವಾಗಿ ಎಚ್ಚರಿಕೆ ವಹಿಸದೇ ಮೇಲ್ಕಂಡ ಆಸ್ತಿಗಳ ಬಗ್ಗೆ ಮೇಲೆ ಹೇಳಿದವರ ಜೊತೆ ವ್ಯವಹರಿಸಿದಲ್ಲಿ ಮುಂದೆ ಬರುವ ಎಲ್ಲಾ ಕಾನೂನು ತೊಡಕುಗಳಿಗೆ ಅವರೇ ಹೊಣೆಗಾರಾಗಿರುತ್ತಾರೆಂದು ಎಚ್ಚರಿಸಲಾಗಿದೆ.

ದಿನಾಂಕ : 02.01.2024
ಸ್ಥಳ : ದಾವಣಗೆರೆ

**ಡಿ. ನಾಗರಾಜ @ ನಾಗರಾಜಪ್ಪ**

# ಅಕ್ಷರದೀಪ ಬೆಳಗಿದ ಅಕ್ಕರೆಯ ತಾಯಿ : ಸಾವಿತ್ರಿಬಾಯಿ ಫುಲೆ

**(ಸೇವಾ ಮನೋಭಾವದಿಂದ ಸದ್ದಿಲ್ಲದೆ ಕೆಲಸ ಮಾಡಿ ಅರಿವಿನ ಆಗರವಾಗಿ, ಜ್ಞಾನದ ಕಣಜವಾಗಿ, ಸಾಮಾಜಿಕ ಹೋರಾಟಗಾರ್ತಿಯಾಗಿ. ಆಧುನಿಕ ಶಿಕ್ಷಣದ ಮಹಾತಾಯಿಯಾಗಿ, ಭಾರತದ ಮೊಟ್ಟಮೊದಲ ಶಿಕ್ಷಕಿಯಾಗಿ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಭದ್ರಬುನಾದಿ ಹಾಕಿದ ಶ್ರೇಷ್ಠ ಸಾಧಕಿ ಸಾವಿತ್ರಿಬಾಯಿ ಫುಲೆಯವರ ಜನ್ಮದಿನ ಜನವರಿ 3 ರಂದು ತನ್ನಿಮಿತ್ಯ ಈ ಲೇಖನ)**

**ತನ್ನ ನೋಡಲಿ ಎಂದು ಕನ್ನಡಿಯು ಕರೆವುದೆ**
**ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು**
**ಕನ್ನಡಿಯಂತೆ ಸರ್ವಜ್ಞ ||**

ಎಂಬ ಕವಿ ನುಡಿಯು ಶಿಕ್ಷಣದ ಮಹತ್ವವನ್ನು ಸಾರುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣವೆಂಬ ಸಂಸ್ಕಾರ ಅಗತ್ಯ. ಕಲಿಕೆ ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಮಾನವ ಗರ್ಭದಿಂದ ಘೋರಿಯವರೆಗೆ ಪ್ರತಿಯೊಂದು ಹಂತದಲ್ಲೂ ಕಲಿಕೆಯಲ್ಲಿ ತೊಡಗಿರುತ್ತಾನೆ. ಈ ಹಿನ್ನೆಲೆಯಲ್ಲಿ ಮಗುವೊಂದು ಹೆಚ್ಚಿನ ಜ್ಞಾನ, ಸಂಸ್ಕಾರ ಪಡೆಯುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಇತಿಹಾಸವನ್ನು ಅವಲೋಕಿಸಿದಾಗ ಸಮಾಜದಲ್ಲಿ ಸಾಕಷ್ಟು ಅಸಮಾನತೆ ಇದ್ದು, ಎಲ್ಲರೂ ಶಿಕ್ಷಣದಿಂದ ವಂಚಿತರಾಗಿದ್ದಾಗ ನಿಸ್ವಾರ್ಥ ಸೇವಾಭಾವದಿಂದ ಎಲ್ಲರಿಗೂ ಶಿಕ್ಷಣ ದೊರಕಿಸುವ ಮುಖೇನ ಸಮ ಸಮಾಜದ ಕನಸು ಕಂಡು, ಅದನ್ನು ಸಾಕಾರ ಗೊಳಿಸಿದ ಅನೇಕ ದಾರ್ಶನಿಕರು ಕಂಡುಬರುತ್ತಾರೆ. ಅತ್ಯುತ್ತಮ ಸಂಸ್ಕೃತಿಯೆಂದು ಇಡೀ ಜಗತ್ತಿನ ಗಮನವನ್ನು ತನ್ನ ಕಡೆಗೆ ಸೆಳೆದ ಭಾರತೀಯ ಭವ್ಯ ಪರಂಪರೆಗೆ ಹೆಣ್ಣಿನ ಪಾತ್ರ ಅಗಾಧವಾಗಿದೆ.

**ಮನೆಯೆ ಮೊದಲ ಪಾಠಶಾಲೆ**
**ಜನನಿ ತಾನೆ ಮೊದಲ ಗುರುವು**
**ಜನನಿಯಿಂದ ಪಾಠ ಕಲಿತ ಜನರು ಧನ್ಯರು**

ಎಂಬ ನುಡಿಯಂತೆ ಒಬ್ಬ ಹೆಣ್ಣು ಸುಶಿಕ್ಷಿತಳಾದರೆ ಮಕ್ಕಳಿಗೆ ಸಂಸ್ಕಾರ ಕೊಡುತ್ತಾ, ಚಲನಶೀಲ ಸಮಾಜಕ್ಕೆ ಮುನ್ನುಡಿ ಬರೆಯುತ್ತಾಳೆ. ಈ ಹಿನ್ನೆಲೆಯಲ್ಲಿ ಕನ್ನಡದ ಮೊಟ್ಟಮೊದಲ ಕವಯತ್ರಿ ಅಕ್ಕಮಹಾದೇವಿ ಕಂಗೊಳಿಸಿದರೆ, ಭಾರತದ ಮೊಟ್ಟಮೊದಲ ಶಿಕ್ಷಕಿಯಾಗಿ ಸಾವಿತ್ರಿಬಾಯಿ ಫುಲೆ ಪ್ರಮುಖರಾಗಿದ್ದಾರೆ. 'ಸೇವಾ ಹಿ ಪರಮೋಧರ್ಮ' ಎನ್ನುವ ಉಕ್ತಿಯಂತೆ ಅಂದು ಸಮಾಜದಲ್ಲಿ ಅಕ್ಷರದಿಂದ ವಂಚಿತಳಾಗಿದ್ದ ಹೆಣ್ಣಿಗೆ ಶಿಕ್ಷಣ ಒದಗಿಸಿಕೊಟ್ಟು, ಸ್ತ್ರೀ ವಿಮೋಚನೆಯ ಕನಸನ್ನು ನನಸು ಮಾಡಿದವರು ಇವರು.



ಮಹಾರಾಷ್ಟ್ರದ ಸತಾರ ಜಿಲ್ಲೆಯ ಒಂದು ಚಿಕ್ಕ ಹಳ್ಳಿ ನಾಯಗಾಂವಿನ ಖಂಡೋಜಿ ನೆವಶೆ ಪಾಟೀಲರ ಹಿರಿಯ ಮಗಳಾಗಿ 1831 ರಲ್ಲಿ ಜನಿಸಿದ ಸಾವಿತ್ರಿಯವರು ಅಂದು ಬಾಲ್ಯವಿವಾಹ ರೂಢಿಯಲ್ಲಿದ್ದ ಕಾಲವಾದ್ದರಿಂದ ತಮ್ಮ ಒಂಭತ್ತನೇ ವಯಸ್ಸಿನಲ್ಲಿ 13 ವರ್ಷದ ಜ್ಯೋತಿಬಾ ಫುಲೆ ಅವರೊಂದಿಗೆ ವಿವಾಹವಾದರು. ಆ ಕಾಲಘಟ್ಟದಲ್ಲಿ ಜ್ಯೋತಿಬಾ ಫುಲೆಯವರು ಪ್ರಗತಿಶೀಲ ಚಿಂತಕರಾಗಿದ್ದರಿಂದ ತಮ್ಮ ಮಡದಿಗೆ ತಾವೇ ಗುರುಗಳಾಗಿ ಅವರ ಸಾಧನೆಗೆ ನೀರೆರೆದು ಪೋಷಿಸಿದರು. ಅದರ ಪರಿಣಾಮವಾಗಿ ಸಾವಿತ್ರಿಬಾಯಿ ಫುಲೆ ಸಮಾಜದಲ್ಲಿದ್ದ ಅಸಮಾನತೆಯನ್ನು ಹೋಗಲಾಡಿಸುವ ಕ್ರಾಂತಿಯ ಕಿಡಿಯಾದರು. 1847 ರಲ್ಲಿ ಪತಿಯ ಸಹಕಾರದಿಂದ ಶ್ರೀಮತಿ ಮಿಚಲ್ ಅವರ ನಾರ್ಮಲ್ ಶಾಲೆಯಲ್ಲಿ ಶಿಕ್ಷಕರ ತರಬೇತಿ ಪಡೆದು, ಶ್ರೀಭಿಡೆಯವರ ಮನೆಯಲ್ಲಿ ಪ್ರಾರಂಭವಾದ ಹೆಣ್ಣುಮಕ್ಕಳ ಶಾಲೆಯ ಪ್ರಧಾನ ಶಿಕ್ಷಕಿಯಾದರು.

ಆ ಸಂದರ್ಭದಲ್ಲಿ ಸ್ತ್ರೀಯೊಬ್ಬಳು ಶಿಕ್ಷಕಿಯಾಗುವುದೆಂದರೆ ಧರ್ಮ ಮತ್ತು ಸಮಾಜಕ್ಕೆ ಅಪಚಾರವೆಸಗಿದಂತೆ ಎಂಬ ಮೌಢ್ಯತೆ ಆಳವಾಗಿ ಬೇರೂರಿದ್ದರಿಂದ, ಅವರು ಶಾಲೆಗೆ ಹೊರಟಾಗ ಕೆಲವರು ಅಪಹಾಸ್ಯ ಮಾಡಿ ಅವರ ಮೇಲೆ ಸಗಣಿ, ಕೆಸರನ್ನು ಎರಚಿ, ಕಲ್ಲು ತೂರಿ ತೊಂದರೆ ಕೊಡುತ್ತಿದ್ದರು. ಇದರಿಂದ ಧೃತಿಗೆಡದೆ ತಮಗೆ ಬಂದ ಟೀಕೆ, ತೊಂದರೆಗಳನ್ನೇ ಧನಾತ್ಮಕವಾಗಿ ಸ್ವೀಕರಿಸಿ, ಎಲ್ಲಾ ಸವಾಲುಗಳನ್ನು ಮೆಟ್ಟಿನಿಂತು ಸಮಾಜಸೇವಾ ಕೈಂಕರ್ಯಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಂಡರು.

ಗಂಡ-ಹೆಂಡಿರಿಬ್ಬರ ಮನಸ್ಸು ಒಂದಾಗಿದ್ದರೆ ದೇವರ ಮುಂದೆ ನಂದಾದೀವಿಗೆ ಮೂಡಿಸಿದಂತೆ ಎಂಬ ಶರಣರ ವಾಣಿಯಂತೆ ದಂಪತಿಗಳಿಬ್ಬರು ಸಮಚಿತ್ತತೆ, ಸಮಭಾವ, ಸೇವಾಭಾವ ರೂಢಿಸಿಕೊಂಡು ಸಮಾಜದ ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ, ಸತಿಸಹಗಮನ ಪದ್ಧತಿ, ಕೇಶಮುಂಡನೆ ಪದ್ಧತಿಗಳ ವಿರುದ್ಧ ಹೋರಾಟ ಮಾಡಿದರು. ಪರಿಪೂರ್ಣ ಶಿಕ್ಷಣ ಸಂಘಟನೆಗೆ ಮೂಲ, ಸಂಘಟನೆಯಾದಾಗ ಹೋರಾಟ ಸಾಧ್ಯ ಎಂಬುದನ್ನು ಅರಿತು ಕರುಣೆ, ವಿನಯ, ಸಹನೆಯನ್ನು ರೂಢಿಸಿಕೊಂಡು, ಶೋಷಿತರ ವಿಮೋಚನೆಯನ್ನು ಮಾಡಿಸಿದ ಕೀರ್ತಿ ಫುಲೆ ದಂಪತಿಗಳಿಗೆ ಸಲ್ಲುತ್ತದೆ. ಅಜ್ಞಾನ ವಿಮೋಚನೆಗೆ ಅಕ್ಷರ ಕ್ರಾಂತಿಯನ್ನು ಆರಂಭಿಸಿ 1848 ರಲ್ಲಿ ತಮ್ಮ ಮನೆಯಲ್ಲಿಯೇ ಶಾಲೆಯನ್ನು ತೆರೆದು, ಶೋಷಿತರು ಮತ್ತು ಮಹಿಳೆಯರಿಗೆ ಅಕ್ಷರ ಜ್ಞಾನದೀಕ್ಷೆ ನೀಡಿ ಹೊಸ ಬೆಳಕಿನ ಶಿಕ್ಷಣ, ಸಂಸ್ಕಾರ ಕೊಟ್ಟರು. 1848ರಿಂದ 1852ರ ಅ ವಧಿಯಲ್ಲಿ 18 ಪಾಠಶಾಲೆಗಳನ್ನು ತೆರೆದು ಅದರ ಸಂಪೂರ್ಣ ಜವಾಬ್ದಾರಿ ಹೊತ್ತು, ಶಿಕ್ಷಕಿಯಾಗಿ, ಸಂಚಾಲಕಿ ಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ ಕೆಲಸ ನಿರ್ವಹಿಸಿದರು. ಮುಂದೆ ಸಮಾಜಸೇವೆಗಾಗಿ ತಮ್ಮನ್ನು ಸಂಪೂರ್ಣ ಮುಡಿಪಾಗಿಟ್ಟು, ಸಾಮಾಜಿಕ ಬದಲಾವಣೆ ಮೂಲದಿಂದಲೇ ಪ್ರಾರಂಭವಾಗಬೇಕೆಂದು ಬಯಸಿ ಜಡ್ಡುಗಟ್ಟಿದ ಸಂಪ್ರದಾಯಗಳಿಗೆ ಅಂತ್ಯ ಹಾಡಿ ಅಂತರ್ಜಾತಿ ವಿವಾಹವನ್ನು ಮಾಡಿಸಿದರು. ಸಮಾಜದಲ್ಲಿ ಅವರಿಗೆ ತೊಂದರೆಯಾದಾಗ ಅಂತಹ ದಂಪತಿಗಳಿಗೆ ಅವರೇ ಆಶ್ರಯ ನೀಡಿದರಲ್ಲದೆ ಅಬಲಾಶ್ರಮಗಳನ್ನು ಸ್ಥಾಪನೆ ಮಾಡಿದರು. ಶಾಲೆಯನ್ನು ತೊರೆಯದಂತೆ ವಿದ್ಯಾರ್ಥಿಗಳು ಶಿಕ್ಷಣವನ್ನು ಪೂರೈಸಿಕೊಳ್ಳಲು ಸ್ಟೈಫಂಡ್ ಕೊಡುವ ಯೋಜನೆ ಜಾರಿಗೊಳಿಸಿದ ಇವರು ಕೂಲಿ ಕಾರ್ಮಿಕರಿಗಾಗಿ ರಾತ್ರಿ ಪಾಳೆಯದ ಶಾಲೆ ಪ್ರಾರಂಭಿಸಿದರು.

ಒಬ್ಬ ಉತ್ತಮ ಶಿಕ್ಷಕಿಯಾಗಿದ್ದು ನಿರಂತರ ಹೋರಾಟ ಮಾಡಿ ಸಮಸಮಾಜದ ಕಲ್ಪನೆಗೆ ನಾಂದಿ ಹಾಡಿದರಲ್ಲದೆ, ಸೃಜನಶೀಲ ಕವಯತ್ರಿಯೂ ಆಗಿದ್ದು ಸೂಕ್ಷ್ಮ ಸಂವೇದನೆಯನ್ನು ಒಳಗೊಂಡಂತೆ ಕೆಲವು ಕಾವ್ಯಕೃತಿಗಳನ್ನು ರಚಿಸಿದ್ದಾರೆ. 1854 ರಲ್ಲಿ ಕಬ್ಯಾಫುಲೆ (ಕಾವ್ಯ ಹೂವು)ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ, ಇದರಲ್ಲಿ ಸಾಮಾಜಿಕ ಕಳಕಳಿಯುಳ್ಳ 41 ಕವಿತೆಗಳಿವೆ. ಅವರ 2ನೇ ಕೃತಿ ಭವನಕಾಶಿ ಸುಬೋಧ ರತ್ನಾಕರ (ಅಪ್ಪಟ ಮುತ್ತುಗಳ ಸಾಗರ) 1891ರಲ್ಲಿ ಪ್ರಕಟಗೊಂಡರೆ, ಜ್ಯೋತಿಬಾ ಅವರ ಭಾಷಣಗಳ ಸಂಗ್ರಹ ಸಂಪಾದನಾ ಕೃತಿ 1892ರಲ್ಲಿ ಪ್ರಕಟಗೊಂಡಿವೆ.

ಅಸಾಧಾರಣ ದಿಟ್ಟತನ, ಬದ್ಧತೆ, ಕಷ್ಟಸಹಿಷ್ಣುತೆಗಳನ್ನು ಸಹಿಸಿಕೊಂಡು ಸೇವಾಮನೋಭಾವದಿಂದ ಸದ್ದಿಲ್ಲದೆ ಕೆಲಸ ಮಾಡಿ ಅರಿವಿನ ಆಗರವಾಗಿ, ಜ್ಞಾನದ ಕಣಜವಾಗಿ, ಸಾಮಾಜಿಕ ಹೋರಾಟಗಾರ್ತಿಯಾಗಿ. ಆಧುನಿಕ ಶಿಕ್ಷಣದ ಮಹಾತಾಯಿಯಾಗಿ, ಭಾರತದ ಮೊಟ್ಟಮೊದಲ ಶಿಕ್ಷಕಿಯಾಗಿ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಭದ್ರಬುನಾದಿ ಹಾಕಿದ ಶ್ರೇಷ್ಠ ಸಾಧಕಿ ಸಾವಿತ್ರಿಬಾಯಿ ಫುಲೆ. ಇವರ ಸಾಧನೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ ಇಂಡಿಯಾಸ್ ಫಸ್ಟ್ ಲೇಡಿ ಟೀಚರ್ ಎಂದು ಕರೆದು ಗೌರವಿಸಿರುವುದು ಶ್ಲಾಘನೀಯ. ಇದುವರೆಗೂ ಅವರನ್ನು ಕುರಿತು ಮರಾಠಿಯಲ್ಲಿ 200 ಕ್ಕೂ ಹೆಚ್ಚು ಪುಸ್ತಕಗಳು ಬಂದಿವೆ.

ಪ್ರಸ್ತುತ ಸಂದರ್ಭದಲ್ಲಿ ಅವಕಾಶಗಳಿದ್ದರೂ ಕೂಡ ಹೆಣ್ಣು ಸಾಧನೆಯ ಕಡೆಗೆ ತನ್ನನ್ನು ತೊಡಗಿಸಿಕೊಳ್ಳಲಾಗದೆ, ಸಂದಿಗ್ಧತೆಯಲ್ಲಿದ್ದಾಳೆ. ಆದರೆ ತುಂಬಾ ಹಿಂದೆ ಅಂಧಕಾರವೇ ತುಂಬಿದ್ದ ಕಾಲಘಟ್ಟದಲ್ಲಿ ಇಂತಹದ್ದೊಂದು ಸಾಧನೆ ಮಾಡಿ ಸ್ತ್ರೀ ಸಮೂಹಕ್ಕೆ ಚೈತನ್ಯದ ಚಿಲುಮೆಯಾಗಿ ಕಂಗೊಳಿಸುತ್ತಿರುವ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನ ಇದೇ ಜನವರಿ 3 ರಂದು. ಬದುಕಿನಲ್ಲಿ ನೋವನ್ನೆಲ್ಲಾ ತಾನುಂಡು ನಲಿವನ್ನು ನೀಡುತ್ತಾ ಮಹಿಳೆಯರು ಮತ್ತು ಮಕ್ಕಳ ಬದುಕಿಗೆ ನೆಲೆಯೊದಗಿಸಿ ಸ್ಫೂರ್ತಿಯ ಸೆಲೆಯಾಗಿರುವ ತಾಯಿಯ ಜೀವನ ನಮ್ಮೆಲ್ಲರಿಗೂ ಸ್ಫೂರ್ತಿಯಾಗಲಿ.



**- ಡಾ. ಗೀತಾ ಬಸವರಾಜು**
ಉಪನ್ಯಾಸಕರು
ಎ.ವಿ.ಕೆ.ಕಾಲೇಜು,
ದಾವಣಗೆರೆ.

## ಬಸಾಪುರದಲ್ಲಿ ಮಹೇಶ್ವರ ಜಾತ್ರೆ

**(1ನೇ ಪುಟದಿಂದ)** ತೇಲಿ ಒಂದು ಮುಳುಗಿದರೆ ಸಾಧಾರಣ ಫಲ ಎಂಬುದು ಇಲ್ಲಿನ ಗ್ರಾಮಸ್ಥರ ನಂಬಿಕೆಯಾಗಿದೆ. ಇಂದು 10 ಕ್ವಿಂಟಾಲ್ ಅಕ್ಕಿಯ ಅನ್ನ ಮಾಡಿದ್ದೇವೆ. ನಾಳೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಲಿದ್ದು, 15 ಕ್ವಿಂಟಾಲ್ ಅನ್ನ ಮಾಡುವುದಾಗಿ ಭಕ್ತ ಮುಖಂಡರು ಪತ್ರಿಕೆಗೆ ತಿಳಿಸಿದರು. ಜಾತ್ರೆಯ ಹಿಂದಿನ ದಿನ ಆನೆಕೊಂಡ ಬಸವೇಶ್ವರ ಸ್ವಾಮಿ ಹಾಗೂ ಬಸಾಪುರದ ಗುರು ಸಿದ್ದೇಶ್ವರ ಸ್ವಾಮಿ ಹಾಗೂ ಹಾಲಸ್ವಾಮಿ ದೇವರುಗಳನ್ನು ಪಲ್ಲಕ್ಕಿ ಮೂಲಕ ಮೆರವಣಿಗೆಯಲ್ಲಿ ಕರೆ ತಂದ ಮೇಲೆಯೇ ಪ್ರಸಾದ ತಯಾರಿಸಲು ಒಲೆ ಹಚ್ಚುವುದು ಇಲ್ಲಿನ ವಾಡಿಕೆಯಾಗಿದೆ. ಜಾತ್ರೆ ಮುಗಿದ ಮೇಲೆ ಈ ದೇವರುಗಳು ವಾಪಸ್ ತಮ್ಮ ಮೂಲ ಸ್ಥಾನಗಳಿಗೆ ತೆರಳುತ್ತವೆ.

## ಮಾಹಿತಿ ನೀಡಿದರೆ ಕ್ರಮವಿಲ್ಲ

**(1ನೇ ಪುಟದಿಂದ)** ಎಂದು ಅಧಿಕಾರಿ ತಿಳಿಸಿದ್ದಾರೆ. ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿ ಅಪಘಾತ ನಡೆಸಿ ಸಾವಿಗೆ ಕಾರಣವಾದ ನಂತರವೂ, ಪೊಲೀಸರಿಗೆ ಇಲ್ಲವೇ ನ್ಯಾಯಾಧೀಶರಿಗೆ ಮಾಹಿತಿ ನೀಡದೇ ಇದ್ದರೆ ಹತ್ತು ವರ್ಷಗಳವರೆಗೆ ಶಿಕ್ಷೆ ಹಾಗೂ ದಂಡ ವಿಧಿಸಲು ನೂತನ ಕಾಯ್ದೆಯಲ್ಲಿ ಅವಕಾಶ ಇದೆ. ಆದರೆ, ಅಪಘಾತದ ಸಂದರ್ಭದಲ್ಲಿ ಚಾಲಕರು ಪೊಲೀಸರಿಗೆ ವಾಹನ ಸಂಖ್ಯೆ, ಸಂಪರ್ಕ ವಿವರಗಳನ್ನು ನೀಡಬೇಕು. ಅಗತ್ಯವಾದಲ್ಲಿ ತನಿಖೆಗೆ ಸಹಕರಿಸುವುದಾಗಿ ತಿಳಿಸಬೇಕು. ಇಂತಹ ಸಂದರ್ಭದಲ್ಲಿ ಕಠಿಣ ಕ್ರಮ ಅನ್ವಯವಾಗುವುದಿಲ್ಲ ಎಂದೂ ಅಧಿಕಾರಿ ಹೇಳಿದ್ದಾರೆ.

ಕುಡಿದು ವಾಹನ ಚಲಾಯಿಸಿದಾಗ ಹಾಗೂ ಪಾನಮತ್ತನಾಗಿ ಅಪಘಾತಕ್ಕೆ ಕಾರಣವಾದಾಗ ಕಠಿಣ ಕಾಯ್ದೆ ಅನ್ವಯವಾಗುತ್ತದೆ ಎಂದೂ ಅಧಿಕಾರಿ ಹೇಳಿದ್ದಾರೆ.

## ಮುಷ್ಕರ ವಾಪಸ್

**(1ನೇ ಪುಟದಿಂದ)** ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ (ಎ.ಐ.ಎಂ.ಟಿ.ಸಿ.) ಅಧ್ಯಕ್ಷ ಅಮೃತ್ ಲಾಲ್ ಮದನ್, ಕಠಿಣ ಶಿಕ್ಷೆ ವಿಧಿಸುವ ಕಾಯ್ದೆ ಇನ್ನೂ ಜಾರಿಗೆ ಬಂದಿಲ್ಲ. ಮುಂದಿನ ಸಭೆಯವರೆಗೆ ಜಾರಿಗೆ ತರುವುದಿಲ್ಲ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುಷ್ಕರ ವಾಪಸ್ ಪಡೆಯಲಾಗಿದೆ ಎಂದಿದ್ದಾರೆ.

ಸಾರಿಗೆ ವಲಯದ ಸಂಸ್ಥೆಗಳ ಜೊತೆ ಸಮಗ್ರ ಚರ್ಚೆ ನಡೆಸಿದ ನಂತರವೇ ನೂತನ ಕಾಯ್ದೆಗಳನ್ನು ಜಾರಿಗೆ ತರಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ. ಮುಷ್ಕರ ಆರಂಭವಾದ ನಂತರ ದೇಶದ ಹಲವೆಡೆ ಪೆಟ್ರೋಲ್ ಪೂರೈಕೆಯ ಸಮಸ್ಯೆಯಾಗಿತ್ತು. ರಾಜಸ್ಥಾನದಲ್ಲಿ ಹಿಂಸಾಚಾರದ ಘಟನೆಗಳು ಸಂಭವಿಸಿದ್ದವು. ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿತ್ತು.

## ಪಿಂಚಣಿ ನೀಡಲು ಅವಕಾಶ

**(1ನೇ ಪುಟದಿಂದ)** ಮೊದಲು ಪಿಂಚಣಿ ನೀಡಲಾಗುತ್ತದೆ. ನಂತರದಲ್ಲಿ ಉಳಿದವರು ಅರ್ಹತೆ ಪಡೆಯುತ್ತಾರೆ. ಈಗ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಕೌಟುಂಬಿಕ ಪಿಂಚಣಿಗೆ ಗಂಡನ ಬದಲು ಮಕ್ಕಳನ್ನು ನೇಮಿಸಬಹುದು. ಈ ಬಗ್ಗೆ ಮಹಿಳಾ ಉದ್ಯೋಗಿ ತಮ್ಮ ಕಚೇರಿಗೆ ಮಾಹಿತಿ ನೀಡಬೇಕಿದೆ.

## ಸಮಿತಿ ಸಭೆ ಕರೆಯಲು ಆಗ್ರಹ

**(1ನೇ ಪುಟದಿಂದ)** ಎಸ್.ಎಸ್. ಮಲ್ಲಿಕಾರ್ಜುನ್ ಅವರು, ಈ ಭಾಗದ ರೈತರ ಹಿತ ಕಾಪಾಡುವ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದರು.

ಭದ್ರಾ ನಾಲೆಗೆ ನೀರು ಹರಿಸುತ್ತಿರುವುದರಿಂದ ಈ ಭಾಗದ ತೋಟಗಳಲ್ಲಿರುವ ಬೋರ್‌ಗಳಲ್ಲಿ ನೀರು ಬರುತ್ತಿದೆ. ನೀರು ಸ್ಥಗಿತವಾದರೆ ಅಂತರ್ಜಲ ಬತ್ತಿ ಬೋರ್‌ಗಳಲ್ಲೂ ನೀರು ಸಿಗದ ಪರಿಸ್ಥಿತಿ ಉಂಟಾಗಲಿದೆ. ಪ್ರಸ್ತುತ ಭದ್ರಾ ಜಲಾಶಯದಲ್ಲಿ 151 ಅಡಿ ನೀರು ಲಭ್ಯವಿದ್ದು, ಕುಡಿಯಲು ನೀರು ಹರಿಸುವ ಜೊತೆಗೆ ತೋಟಗಳನ್ನೂ ಉಳಿಸಲು ನೀರು ಹರಿಸಬೇಕು ಎಂದರು.

ಭದ್ರಾ ಜಲಾಶಯದಲ್ಲಿ ಸೋರಿಕೆಯಿಂದ ಪೋಲಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ಸೋರಿಕೆ ನಿಯಂತ್ರಿಸಬೇಕು. ಕಾಲುವೆಗಳಿಗೆ ಅಡ್ಡಲಾಗಿ ನಿರ್ಮಿಸಿರುವ ಕೆಲವು ಸೇತುವೆಗಳು ಶಿಥಿಲಗೊಂಡಿದ್ದು, ಶೀಘ್ರ ದುರಸ್ತಿಪಡಿಸಬೇಕು. ಭದ್ರಾ ಮೇಲ್ದಂಡೆ ಯೋಜನೆಗೆ ನಿಯಮಾನುಸಾರ ತುಂಗಭದ್ರಾ ನದಿಯಿಂದ ಭದ್ರಾಕ್ಕೆ ನೀರು ಲಿಫ್ಟ್ ಮಾಡಬೇಕು ಎಂದು ಒತ್ತಾಯಿಸಿದರು.

**ಹದಡಿ ರಸ್ತೆಯಲ್ಲಿ ನಿಟುವಳ್ಳಿ ವೃತ್ತ ಹಾಗೂ ಐಟಿಐ ಕಾಲೇಜು ಬಳಿ ಸಿಗ್ನಲ್ ವ್ಯವಸ್ಥೆ ಅವೈಜ್ಞಾನಿಕವಾಗಿದ್ದು, ಶೀಘ್ರವೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸರಿಪಡಿಸಬೇಕು ಎಂದು ಶಾಸಕ ಹರೀಶ್ ಪತ್ರಿಕಾ ಗೋಷ್ಠಿಯಲ್ಲಿಂದು ಒತ್ತಾಯಿಸಿದರು.**

ಬೇಸಿಗೆ ಆರಂಭವಾಗುತ್ತಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರು ಕುಡಿಯುವ ನೀರಿಗಾಗಿ ಜಿಲ್ಲೆಗೆ ಹೆಚ್ಚಿನ ಅನುದಾನ ತರಬೇಕು ಎಂದು ಹರೀಶ್ ಇದೇ ವೇಳೆ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರುಗಳಾದ ಬಿ.ಎಂ. ಸತೀಶ್ ಕೊಳೇನಹಳ್ಳಿ, ಶಾಮನೂರು ಲಿಂಗರಾಜು, ಆರನೇಕಲ್ ವಿಜಯಕುಮಾರ್, ಚಿಕ್ಕಬೂದಿಹಾಳ್ ಭಗತ್ ಸಿಂಹ ಉಪಸ್ಥಿತರಿದ್ದರು.

## ತೋಟದ ಬೆಳೆಗಳಿಗೆ ನೀರು ಹರಿಸುವ ಹಿನ್ನೆಲೆ : ಸಭೆ

**(1ನೇ ಪುಟದಿಂದ)** ಸಭೆಗೆ ಅಚ್ಚುಕಟ್ಟಿನ ವ್ಯಾಪ್ತಿಯಲ್ಲಿ ಬರುವ ಸಚಿವರಿಗೆ, ಸಂಸದರಿಗೆ, ಶಾಸಕರಿಗೆ ಮತ್ತು ರೈತ ಮುಖಂಡರಿಗೂ ಆಹ್ವಾನ ನೀಡಲಾಗಿದೆ ಎಂದು ತಿಳಿದುಬಂದಿದೆ.

ಭದ್ರಾ ಜಲಾಶಯದಲ್ಲಿ ಮಂಗಳವಾರದ ವರದಿ ಪ್ರಕಾರ 151 ಅಡಿ 4 ಇಂಚು ನೀರಿದ್ದು, ಕಳೆದ ವರ್ಷಕ್ಕಿಂತ 30 ಅಡಿ ನೀರು ಕಡಿಮೆ ಇದೆ. ಕಳೆದ ವರ್ಷ ಜಲಾಶಯದಲ್ಲಿ ಈ ದಿನ 182 ಅಡಿ ನೀರಿನ (67 ಟಿಎಂಸಿ) ಸಂಗ್ರಹವಿತ್ತು.

ಈ ವರ್ಷ ಮಳೆಯ ಕೊರತೆಯಿಂದಾಗಿ ಜಲಾಶಯದಲ್ಲಿ ನೀರಿನ ಸಂಗ್ರಹ ಭಾರೀ ಪ್ರಮಾಣದಲ್ಲಿ ಕಡಿಮೆ ಇರುವುದರಿಂದ ಬೇಸಿಗೆ ಹಂಗಾಮಿನ ಭತ್ತದ ಬೆಳೆಗೆ ನೀರು ಹರಿಸಲು ಸಾಧ್ಯವಿಲ್ಲ. ಪ್ರತಿ ವರ್ಷ ಬೇಸಿಗೆ ಹಂಗಾಮಿನಲ್ಲೂ ಅಚ್ಚುಕಟ್ಟಿನ 2.42 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುತ್ತಿದ್ದ ಭದ್ರಾ ಜಲಾಶಯವು ಈ ಬಾರಿ ಕುಡಿಯುವ ನೀರು ಮತ್ತು ತೋಟದ ಬೆಳೆಗಳಿಗೆ ಕನಿಷ್ಠ ನೀರು ಪೂರೈಸುವುದೂ ಕಷ್ಟಸಾಧ್ಯ ಎಂಬ ಪರಿಸ್ಥಿತಿಯಲ್ಲಿದೆ.



71.535 ಟಿಎಂಸಿ ನೀರಿನ ಸಾಮರ್ಥ್ಯದ ಭದ್ರಾ ಜಲಾಶಯದಲ್ಲಿ ಸದ್ಯ 26.90 ಟಿಎಂಸಿ ನೀರು ಮಾತ್ರ ಸಂಗ್ರಹವಿದ್ದು, ಇದರಲ್ಲಿ ಡೆಡ್ ಸ್ಟೋರೇಜ್ 8.50 ಟಿಎಂಸಿ ಹೊರತುಪಡಿಸಿದರೆ ಉಳಿದ ಸುಮಾರು 18 ಟಿಎಂಸಿ ನೀರು ಮಾತ್ರ ಬಳಕೆಗೆ ಲಭ್ಯವಿರುತ್ತದೆ. ಇದರಲ್ಲಿ 6.5 ಟಿಎಂಸಿ ನೀರನ್ನು ಕಡ್ಡಾಯವಾಗಿ ಕುಡಿಯುವ ನೀರಿಗಾಗಿ ಮೀಸಲಿಡಬೇಕಾಗುತ್ತದೆ. ಉಳಿದ ಸುಮಾರು 12 ಟಿಎಂಸಿ ನೀರನ್ನು ಕೃಷಿ ಉದ್ದೇಶಕ್ಕೆ ಬಳಸಲು ಅವಕಾಶವಿರುತ್ತದೆ. 12 ಟಿಎಂಸಿ ನೀರನ್ನು ಜನವರಿಯಿಂದ ಮೇ ತಿಂಗಳವರೆಗೆ ಅಂದರೆ 5 ತಿಂಗಳವರೆಗೆ ತಿಂಗಳಿಗೆ 10 ದಿನದಂತೆ ನಾಲೆಗಳಿಗೆ ನೀರು ಹರಿಸುವ ಚಿಂತನೆಯನ್ನು ಅಧಿಕಾರಿಗಳು ಹೊಂದಿದ್ದಾರೆ ಎನ್ನಲಾಗಿದೆ.

**15 ದಿವಸ ನೀರು ಹರಿಸಲು ಆಗ್ರಹ**

**ಅಚ್ಚುಕಟ್ಟಿನ ತೋಟದ ಬೆಳೆಗಳಿಗೆ 15 ದಿವಸ ನೀರು ಹರಿಸಿ 20 ದಿವಸ ಬಂದ್ ಮಾಡುವ 'ಆನ್ ಅಂಡ್ ಆಫ್' ಪದ್ಧತಿ ಜಾರಿ ಮಾಡುವಂತೆ ಭದ್ರಾ ಅಚ್ಚುಕಟ್ಟಿನ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ಆಗ್ರಹಿಸಿದ್ದಾರೆ.**

ಜಲಾಶಯದಲ್ಲಿ ನೀರು ಗಣನೀಯ ಪ್ರಮಾಣದಲ್ಲಿ ಕಡಿಮೆ ಇರುವುದರಿಂದ ನೀರನ್ನು ಯಾವ ರೀತಿಯಲ್ಲಿ ಹಂಚಿಕೆ ಮಾಡಬೇಕೆಂಬ ದೊಡ್ಡ ಸವಾಲು ಐಸಿಸಿ ಸಭೆಗೆ ಎದುರಾಗಿದ್ದು, ಅಚ್ಚುಕಟ್ಟಿನ ತೋಟದ ಬೆಳೆಗಾರರ ಚಿತ್ತ ಜ. 6 ರಂದು ನಡೆಯುವ ಭದ್ರಾ ಕಾಡಾ ಸಭೆಯತ್ತ ಇದೆ.

## ಜೆಎನ್.1 ಸೋಂಕು ಮಾರಣಾಂತಿಕವಲ್ಲ

**(1ನೇ ಪುಟದಿಂದ)** ಕ್ರಮೇಣವಾಗಿ ಕಡಿಮೆಯಾಗುತ್ತಿದೆ, ರಾಜ್ಯದಲ್ಲೂ ಒಂದು ವೇಳೆ ಹಬ್ಬಿದರೆ ಏನೆಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದೆಲ್ಲವನ್ನು ತೆಗೆದುಕೊಂಡಿದ್ದೇವೆ. ಕೋವಿಡ್ ವಾರಿಯರ್ಸ್‌ಗಳು ಫ್ಲೂ-ಲಸಿಕೆ ಪಡೆಯಬೇಕು.

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪರೀಕ್ಷಾ ಸಾಮರ್ಥ್ಯ ಹೆಚ್ಚಿಸಲಾಗುತ್ತಿದೆ, ಜೊತೆಗೆ ಆರೋಗ್ಯ ಸೌಲಭ್ಯಗಳ ಕಾರ್ಯ ಸಿದ್ಧತೆ ನಡೆಸಲಾಗಿದೆ ಎಂದು ಸಚಿವರು ಹೇಳಿದರು.

**ಸೈಟು ಮಾರಾಟಕ್ಕಿವೆ**
KHB ಲೇಔಟ್‌ನಲ್ಲಿ 50x80 ಪೂರ್ವ, ನಲವತ್ತು ಅಡಿ ರಸ್ತೆಗೆ. 30x50 ಪಶ್ಚಿಮ, ಪಾರ್ಕ್ ಎದುರು 30x40 ಪಶ್ಚಿಮ.
G.H. Ashok kundavada
97402 20709

**ಬೇಕಾಗಿದ್ದಾರೆ**
ಬೇಸಿಕ್ ಮತ್ತು ಟ್ಯಾಲಿ ಟೀಚ್ ಮಾಡಲು ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ.
**ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಷನ್**
# 3454, ಎಂ.ಸಿ.ಸಿ. 'ಬಿ' ಬ್ಲಾಕ್, ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಮೊ. 90364-27272

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಪೋದಾರ್ ಸ್ಕೂಲ್ ಎದುರುಗಡೆ 20x30 East, 20x30 South ಸೈಟುಗಳು. Rate - 25 ಲಕ್ಷಕ್ಕೆ. 20x30 East, 20x30 West ಮನೆಗಳು 40 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ರೂಂ ಬಾಡಿಗೆಗೆ ಇದೆ**
ಹಳೇ ಸರ್ಕಾರಿ ಆಸ್ಪತ್ರೆ ಎದುರು, ಶಿವ ಬ್ಯಾಂಕ್ ಪಕ್ಕದಲ್ಲಿರುವ 'ವೆಂಕಟರಾಜು ಭವನ'ದ 1ನೇ ಮಹಡಿಯಲ್ಲಿ 12x8 ಅಳತೆಯ ಕಾಂಕ್ರೀಟ್ ವಾಲ್ ಇರುವ ರೂಂ ಬಾಡಿಗೆಗೆ ಇದೆ. ಸಿಲ್ವರ್ ಐಟಂಗಳ ಸಂಗ್ರಹಣೆ, ಆಫೀಸ್ ಮಾಡಲು ಮಳಿಗೆ ಯೋಗ್ಯವಾಗಿದೆ. ಸಂಪರ್ಕಿಸಿ :
99451-59582

**ಬೇಕಾಗಿದ್ದಾರೆ**
ಮೆಸ್‌ನಲ್ಲಿ ಕೆಲಸ ಮಾಡಲು ಭಟ್ಟರು ಬೇಕಾಗದ್ದಾರೆ.
ಸಂಪರ್ಕಿಸಿ :
96321 64685

**ಮನೆ ಬಾಡಿಗೆಗಿದೆ**
ಆಂಜನೇಯ ಬಡಾವಣೆಯಲ್ಲಿ ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರಿನ ಸೌಲಭ್ಯವಿರುವ ಡಬಲ್ ಬೆಡ್ ರೂಂನ ವಾಸ್ತು ಪ್ರಕಾರದ ನೆಲ ಮಹಡಿ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
ಮೊ. 98441-25262

**ಮಳಿಗೆ ಬಾಡಿಗೆಗೆ ಇದೆ**
ಹಳೇ ಸರ್ಕಾರಿ ಆಸ್ಪತ್ರೆ ಎದುರು, ಶಿವ ಬ್ಯಾಂಕ್ ಪಕ್ಕದಲ್ಲಿರುವ 'ವೆಂಕಟರಾಜು ಭವನ'ದ 1ನೇ ಮಹಡಿಯಲ್ಲಿ 22x18 ಅಳತೆಯ ಮಳಿಗೆ ಬಾಡಿಗೆಗೆ ಇದೆ. ಪ್ಲಾಸ್ಟಿಕ್ ಸಾಮಾನು, ಡಿಸ್ಪೋಸಬಲ್ ಐಟಂಗಳ ಸ್ಟೋರೇಜ್ ಮಾಡಲು ಮಳಿಗೆ ಯೋಗ್ಯವಾಗಿದೆ. ಸಂಪರ್ಕಿಸಿ :
99451-59582

**ಬೇಕಾಗಿದ್ದಾರೆ**
ಸೇಲ್ಸ್ ಮನ್ (ಪಾರ್ಟ್ ಟೈಂ/ಫುಲ್ ಟೈಂ) ಹಾಗೂ ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ ಅನುಭವವುಳ್ಳವರು
ಸಂಪರ್ಕಿಸಿ : **ಮಣಿಕಂಠ ಏಜೆನ್ಸೀಸ್**
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್ಎಂ., ಎಎನ್ಎಂ
91486 83185

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಹತ್ತಿರ ಗೀತಂ ಕಾಲೇಜ್ ಸುತ್ತ-ಮುತ್ತ 30x50, 30x50 East ಅಕ್ಕ-ಪಕ್ಕ, 30x40, 30x40 West ಅಕ್ಕ-ಪಕ್ಕ, 30x40, 30x40 East ಅಕ್ಕ-ಪಕ್ಕ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅನುಭವಿ ಕೆಲಸಗಾರರು ಮತ್ತು ಸಪ್ಲೈಯರ್ ಸೇರಿದಂತೆ ಆಲ್‌ರೌಂಡರ್ ಬೇಕಾಗಿದ್ದಾರೆ.
91135 68249

**ಮನೆಗಳು ಮಾರಾಟಕ್ಕಿವೆ**
30x60 ಪಶ್ಚಿಮ ತರಳಬಾಳು ಬಡಾವಣೆ, 44x60 ಪೂರ್ವ MCC 'A' 'B' ಸೈಟ್, 44x60 ಪೂರ್ವ MCC 'B' 'B' 30x40 ಉತ್ತರ SS layout 'B' ಮನೆ 95x100 ಸೈಟ್ NH-4 ರೋಡ್ ಇವೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಸೈಟು ಮಾರಾಟಕ್ಕಿದೆ**
ಡಿಸಿಎಂ ಟೌನ್‌ಶಿಪ್‌ನಲ್ಲಿ 120 ಅಡಿ ರಸ್ತೆಗೆ ಹೊಂದಿಕೊಂಡಿರುವ ದಕ್ಷಿಣ ದಿಕ್ಕಿನ 40x70 ಅಳತೆಯ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ. :
96117 71970
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಬೇಕಾಗಿದ್ದಾರೆ**
ಮಗುವಿನ ಆರೈಕೆ ಮಾಡುವ ಕೆಲಸಕ್ಕೆ ಸ್ತ್ರೀಯರು ಬೇಕಾಗಿದ್ದಾರೆ
ಸಂಪರ್ಕಿಸಿ :
86609 98651
99865 99923

**ಡ್ರೈವರ್ ಬೇಕಾಗಿದ್ದಾರೆ**
ಕಾರ್ ಡ್ರೈವರ್ ಬೇಕಾಗಿದ್ದಾರೆ
ಸಂಪರ್ಕಿಸಿ :
86609 98651
97436 54365

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ :
86609 98651
97436 54365

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೃಂದಾ ಧಮ್ ಬಿರಿಯಾನಿ**
ಕಾರ್ನರ್ ಪಿ.ಬಿ.ರಸ್ತೆ ಅಪೂರ್ವ ಹೋಟೆಲ್ ಎದುರು, ಬೀರಲಿಂಗೇಶ್ವರ ದೇವಸ್ಥಾನ ಪಕ್ಕ, ದಾವಣಗರೆ.
**ನಮ್ಮ ಹೋಟೆಲ್‌ನಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.**
ಕೂಡಲೇ ಸಂಪರ್ಕಿಸಿ.
99018 41529

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಸೌಹಾರ್ದ ಸಂಸ್ಥೆಗೆ ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ.
ಕಲೆಕ್ಷನ್ ಬಾಯ್ಸ್, ಪಿಗ್ಮಿ ಏಜೆಂಟ್, ಮಾರ್ಕೆಟಿಂಗ್
ವಯೋಮಿತಿ 25 ರಿಂದ 40
80503 22279, 99169 22279

**ಸೈಟು ಮಾರಾಟಕ್ಕಿದೆ**
ದಾವಣಗೆರೆ ರವೀಂದ್ರನಾಥ ಬಡಾವಣೆಯಲ್ಲಿ 52x60 North-East, Corner site ಮಾರಾಟಕ್ಕಿವೆ, ( Shashi detergent ಬಟ್ಟೆ ಸೋಪ್ ಫ್ಯಾಕ್ಟರಿ ಎದುರುಗಡೆ) ಸಂಪರ್ಕಿಸಿ :
90195 54141, 98454 17444

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಬೇಕಾಗಿದ್ದಾರೆ**
Ex-Army / ಫೀಲ್ಡ್ ಸೂಪರ್ ವೈಸರ್ ಬೇಕಾಗಿದ್ದಾರೆ.
9 Hours Duty
9113053483

**ಬೇಕಾಗಿದ್ದಾರೆ**
ಪೇಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಉತ್ಸಾಹಿ ಹುಡುಗರು ಹಾಗೂ ಅಕೌಂಟೆಂಟ್ ಬೇಕಾಗಿದ್ದಾರೆ. ವಿನಾಯಕ ಇಂಡಸ್ಟ್ರೀಸ್, ಇಂಡಸ್ಟ್ರಿಯಲ್ ಏರಿಯಾ, ಲೋಕಿಕೆರೆ ರಸ್ತೆ, ದಾವಣಗೆರೆ.
9448150174

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ**
ಎಲ್ಲಾ ರೀತಿಯ ದೈಹಿಕ ರೋಗಗಳು, ಮಾನಸಿಕ ಕಾಯಿಲೆಗಳು ಮತ್ತು ವ್ಯಾಪಾರ, ವ್ಯವಹಾರ, ವೈವಾಹಿಕ, ಶತ್ರುಬಾಧೆ, ಮನೆಯಲ್ಲಿ ಕಿರಿಕಿರಿ ಈ ಎಲ್ಲಾ ಸಮಸ್ಯೆಗಳಿಗೆ ರಾಮ ಬಾಣ.
80733 42011

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician ಬೇಕಾಗಿದ್ದಾರೆ. ಸಂಬಳ +ಇನ್ಸೆಂಟಿವ್ಸ್ ನೀಡುತ್ತೇವೆ. ಸಿಸ್ಟಂ ವರ್ಕ್‌ಗೆ ಲೇಡಿ ಬೇಕಾಗಿದ್ದಾರೆ.
98805 31599

**COMMERCIAL BUILDING FOR RENT**
Harihara Road, Opp. Panchamuki Temple, P.B. Road, Davangere.
Ground floor, 3000 sqft., 1st floor, 3200 sq ft.
8431171529

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ಇಂದು ದಿನಾಂಕ 3.1.2024ರ ಬುಧವಾರ ನಾಳೆ ದಿನಾಂಕ 4.1.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಬೇಕಾಗಿದ್ದಾರೆ**
ಕೌಂಟರ್ ಕೆಲಸಕ್ಕೆ ಹುಡುಗರು ಮತ್ತು ಬೇಕರಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಡೆಲಿವರಿ ಬಾಯ್ಸ್ ಮತ್ತು ಆರ್ಡರ್ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
9980646968, 94485 33617

**ಮಾರಾಟಕ್ಕಿದೆ**
ದಾವಣಗೆರೆ ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿಯಲ್ಲಿರುವ (ಡಾ. ಬುಳಗಣ್ಣನವರ್ ಬಿಲ್ಡಿಂಗ್ ಪಕ್ಕ) ಅಳತೆ 30x90 ಜಾಗದಲ್ಲಿರುವ ಒಂದು ಅಂತಸ್ತಿನ ಮನೆ ಮತ್ತು 2 ಔಟ್ ಹೌಸ್ ಇರುವ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ :
90363 51267

**ನೇರ ಪರೀಕ್ಷೆಗಳು**
SSLC, PUC, NTC : ನರ್ಸರಿ ಟೀಚರ್ಸ್ ಟ್ರೇನಿಂಗ್. BA, B.Com, MA, M. Com, MBA (ALL), ಸಂಪರ್ಕಿಸಿ :
SGET (R) ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ. ಪಿ.ಬಿ. ರೋಡ್ ದಾವಣಗೆರೆ
86602 35013

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆಯ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಗುಮಾಸ್ತರು ಬೇಕಾಗಿದ್ದಾರೆ. ಆಸಕ್ತರು ಬೆಳಿಗ್ಗೆ 11 ರಿಂದ ಸಂಜೆ 5 ರೊಳಗೆ ಕರೆ ಮಾಡಿ:
98440 98780

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ದಾವಣಗೆರೆ.
ಸಂಪರ್ಕಿಸಿ :
74113 99485

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



**ದಾವಣಗೆರೆ : 2 & 3 ರಂದು**
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
**ಡಾ|| ಎಚ್.ಆಯ್. ದೊಡ್ಡಮನಿ** (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್. ಕನ್‌ಸ್ಟ್ರಕ್ಷನ್ಸ್**
Tally ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆ.: 10 ರಿಂದ ಸಂ. : 6
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಹರ್ಷ ಹಾರ್ಡ್‌ವೇರ್ & ಪೈಂಟ್ಸ್.
ಸಂಪರ್ಕಿಸಿ :
82172 99892

**ಬಾಡಿಗೆಗೆ ಇದೆ**
ಸುಸಜ್ಜಿತವಾದ 2 ಬೆಡ್ ರೂಮ್ ಮನೆ, ಬೋರ್‌ವೆಲ್ ಮತ್ತು ನಲ್ಲಿ ನೀರಿನ ಸೌಲಭ್ಯ ಇರುತ್ತದೆ.
Rent - 7000/- Advance - 20000/- KBR Complex, BT Park ಹತ್ತಿರ, LIC Office ಹಿಂಭಾಗ, RMC Link Road, T.C. Layout, Davanagere. Contact :
97427 52669, 99725 35329

**ಮಾರಾಟಕ್ಕಿದೆ**
ದಾವಣಗೆರೆ ನಗರ ಶಂಕರ ವಿಹಾರ ಬಡಾವಣೆ 'ಬಿ' ಬ್ಲಾಕ್, 3ನೇ ಮುಖ್ಯ ರಸ್ತೆ, 2ನೇ ಕ್ರಾಸ್, ವಾರ್ಡ್ ನಂ. 15, ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಬಾಲಕರ ವಿದ್ಯಾರ್ಥಿ ನಿಲಯದ ಮುಂಭಾಗ ಪೂರ್ವ-ದಕ್ಷಿಣ 40x53 ಅಡಿ ಕಾರ್ನರ್ ಸೈಟ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
94483 53127

**COMMERCIAL BUILDING FOR SALE**
@ Davangere
@ Rs. 1 Cr., 30 Lakh
Sharma
63608 66997

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
**ರಾಜು ಪ್ರಿಂಟರ್ಸ್**
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ ಅಡಿಕೆ ತೋಟ, 2.12 ಗುಂಟೆ ಗದ್ದೆ, 8 ಎಕರೆ ಗದ್ದೆ, 10 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಮನೆಗಳು ಲೀಸ್‌ಗಿದೆ**
3BHK, 2BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪಾಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
88616 89590

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
BIET College Road, Siddaveerappa Badavane, 13th Cross, SLN Convent Building, Davanagere.
77603 16576
90080 55813

**NAME CLARIFICATION**
I, M. RAJASHEKHARAPPA S/o. M. SOMAPPA R/o. 2053, 2nd Main Road, 2nd Cross, MCC 'A' Block, Davangere. hereby solemnly swear and affirm an oath as here under. In my aadhar card my name mentioned as **M. Rajashekharappa** and in my pan card my name mentioned as **Rajashekharappa** & father Name In aadhar card mentioned as **M. Somappa** and in pan card name mentioned as **Shanmukhappa** wrongly. above both names are reffer to me only and non else. In future all records and transcations will be in my name.
**M. Rajashekharappa S/o. M. Somappa**

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

# ಹಿಂದೂ ವಿರೋಧಿ ನೀತಿ ಅಲ್ಪ ಸಂಖ್ಯಾತರ ರಕ್ಷಣೆ



## ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿರುವ ಜನ: ವಿಧಾನ ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್

ದಾವಣಗೆರೆ, ಜ.2- ಹಿಂದೂ ವಿರೋಧಿ ನೀತಿ ಅನುಸರಿಸುತ್ತಿರುವ ಸರ್ಕಾರ ಅಲ್ಪ ಸಂಖ್ಯಾತರ ರಕ್ಷಣೆಗೆ ಮುಂದಾಗಿದೆ. ಈ ಸರ್ಕಾರಕ್ಕೆ ಬರುವ ಚುನಾವಣೆಯಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದರು.

ಮಂಗಳವಾರ ನಗರದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಆತ್ಮಹತ್ಯೆಯನ್ನು ಹೀಯಾಳಿಸಿ ಅಪಮಾನ ಮಾಡಲಾಗುತ್ತಿದೆ. ರಾಜ್ಯದಲ್ಲಿ ಬರಗಾಲ ತಾಂಡವವಾಡುತ್ತಿ ದ್ದರೂ ರೈತರಿಗೆ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರು.

ಅಲ್ಪಸಂಖ್ಯಾತರ ಅಭಿವೃದ್ಧಿಗೆ 10 ಸಾವಿರ ಕೋಟಿ ಘೋಷಿಸಿ ಅದರಲ್ಲಿ1000 ಕೋಟಿ ರೂ. ಕಾರ್ಯಯೋಜನೆ ರೂಪಿಸುವಂತೆ ಸೂಚಿಸಲಾಗಿದೆ. ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ದೇವರಾಜ ಅರಸು, ಅಂಬೇಡ್ಕರ್ ಅಭಿವೃದ್ಧಿ ನಿಗಮಗಳಿಗೆ ಒಂದು ಪೈಸೆ ನೀಡಿಲ್ಲ ಎಂದು ದೂರಿದರು.

ಬರಗಾಲ ಬಂದಿರುವ ಈ ಸಂದರ್ಭದಲ್ಲಿ ರೈತರು ಮೊದಲ ಆದ್ಯತೆಯಾಗಬೇಕೋ ಇಲ್ಲ ಅಲ್ಪಸಂಖ್ಯಾತರೋ ಎಂಬುದನ್ನು ಮೆಜೆಸ್ಟಿಕ್‌ನಲ್ಲಿ ಡಬ್ಬ ಇಟ್ಟು ಅಭಿಪ್ರಾಯ ಸಂಗ್ರಹಿಸಲಿ. ಯಾವ ಉತ್ತರ ಬರುತ್ತದೋ ಅವರೇ ತಿಳಿಯಲಿ. ಮುಖ್ಯಮಂತ್ರಿ ಸಮುದಾಯವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದು ಮುಂದಿನ ಲೋಕಸಭಾ ಚುನಾವಣೆ ಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಗೋರಕಕ್ಷರನ್ನು, ಕನ್ನಡಪರ ಹೋರಾಟಗಾರರು ಹಾಗೂ ರಾಮ ಜನ್ಮಭೂಮಿಗೆ ಹೋರಾಟ ಮಾಡಿದವರ ಹಳೆಯ ಪ್ರಕರಣಗಳನ್ನು ಕೈಗೆತ್ತಿಕೊಂಡು ಬಂಧಿಸುತ್ತಿದ್ದು, ಪಿಎಫ್‌ಐ, ಕೆಎಫ್‌ಡಿ ಸಂಘಟನೆಗಳ ಕಾರ್ಯಕರ್ತರನ್ನು ಬಿಡುಗಡೆ ಮಾಡುತ್ತಿದೆ. ಈ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಬುಧವಾರ ಕರೆಕೊಟ್ಟಿರುವ ಪ್ರತಿಭಟನೆಯಲ್ಲಿ ಎಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಕೇಂದ್ರ ಸರ್ಕಾರ ಎನ್‌ಡಿಆರ್‌ಎಫ್ ಅಡಿ ಕರ್ನಾಟಕ ಒಂದೇ ಅಲ್ಲ, ಬೇರೆ ಯಾವ ರಾಜ್ಯಗಳಿಗೂ ಪರಿಹಾರ ನೀಡಿಲ್ಲ. ಬೇರೆ ರಾಜ್ಯಗಳಿಗೆ ನೀಡಿ ಕರ್ನಾಟಕಕ್ಕೆ ನೀಡದೇ ಇದ್ದರೆ ಅವರು ಕೇಳಲಿ. ಅದು ಬಿಟ್ಟು ಕೇಂದ್ರದ ಕಡೆ ಬೊಟ್ಟು ಮಾಡುವುದು ಸರಿಯಲ್ಲ ಎಂದು ರವಿಕುಮಾರ್ ಹೇಳಿದರು.

ಸರ್ಕಾರ 136 ಸೀಟು ಗಳಿಸಿ ಅಧಿಕಾರಕ್ಕೆ ಬಂದರೂ ಜನರ ಭರವಸೆ ಕಳೆದುಕೊಳ್ಳುತ್ತಿದೆ. ಕಾಂಗ್ರೆಸ್ ಶಾಸಕರಿಗೆ ಅನುದಾನ ಕೊಟ್ಟಿಲ್ಲ. ಅದಕ್ಕಾಗಿಯೇ ಶಾಸಕಾಂಗ ಪಕ್ಷದ ಸಭೆಯನ್ನೇ ಕರೆದಿಲ್ಲ. ಈ ಪಕ್ಷಪಾತದ ಸರ್ಕಾರದ ವಿರುದ್ಧ ಹೋರಾಟ ಮಾಡುವುದೇ ನಮ್ಮ ಗುರಿಯಾಗಿದ್ದು, 28 ಸ್ಥಾನಗಳನ್ನು ಗೆಲ್ಲುವುದು ನಮ್ಮ ಗುರಿ ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಮಾಜಿ ಮೇಯರ್ ಎಸ್.ಟಿ.ವೀರೇಶ್, ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಶಿವರಾಜ್ ಪಾಟೀಲ್, ಶ್ರೀನಿವಾಸ ದಾಸಕರಿಯಪ್ಪ, ಪಾಲಿಕೆ ಸದಸ್ಯರಾದ ಎಚ್. ಎಲ್.ಶಿವಪ್ರಕಾಶ್, ಕೆ.ಎಂ.ವೀರೇಶ್, ಸೋಗಿ ಶಾಂತಕುಮಾರ್, ಮುಖಂಡರಾದ ಎಚ್.ಎನ್.ಶಿವ ಕುಮಾರ್, ಧನಂಜಯ ಕಡ್ಲೇಬಾಳು, ಶಿವಾನಂದ ಇದ್ದರು.

# ಹೋರಾಟಗಾರರನ್ನು ಜೈಲಿಗೆ ಕಳಿಸುವುದು ಅಪಮಾನ



ಕರ್ನಾಟಕ ರಕ್ಷಣಾ ವೇದಿಕೆಯ ಪ್ರತಿಭಟನೆಯಲ್ಲಿ ಜಾನಪದ ವಿದ್ವಾಂಸ ಡಾ.ಎಂ.ಜಿ. ಈಶ್ವರಪ್ಪ

ದಾವಣಗೆರೆ, ಜ. 2- ಕನ್ನಡ ಪರ ಹೋರಾಟಗಾರರನ್ನು ಜೈಲಿಗೆ ಕಳಿಸುವುದು ದೊಡ್ಡ ಅಪಮಾನ ಎಂದು ಜಾನಪದ ವಿದ್ವಾಂಸ ಡಾ.ಎಂ.ಜಿ. ಈಶ್ವರಪ್ಪ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಮತ್ತವರ ತಂಡದ ವರನ್ನು ಬಂಧಿಸಿರುವ ಕ್ರಮವನ್ನು ಖಂಡಿಸಿ ಕರವೇ ಜಿಲ್ಲಾ ಘಟಕದ ವತಿಯಿಂದ ಸ್ಥಳೀಯ ಮಹಾನಗರ ಪಾಲಿಕೆ ಆವರಣದಲ್ಲಿ ಇಂದು ಹಮ್ಮಿಕೊಂಡಿದ್ದ ಉಪವಾಸ ಸತ್ಯಾಗ್ರಹದಲ್ಲಿ ಹೋರಾಟಕ್ಕೆ ಬೆಂಬಲಿಸಿ ಮಾತನಾಡಿದರು.

ಕನ್ನಡ ನಾಡಿನ ಅಸ್ಮಿತೆಯ ಭಾಷೆಯ ಮಾನ್ಯತೆ ನೀಡುವ ಸಲುವಾಗಿ ಹೋರಾಟ ನಡೆಸಿದರೆ ಅಂತಹವರನ್ನು ಜೈಲಿಗೆ ಕಳಿಸುವುದು ದೊಡ್ಡ ಅನ್ಯಾಯ ಮಾಡಿದಂತೆ ಎಂದು ಹೇಳಿದರು.

ಕನ್ನಡದ ಅಸ್ಮಿತೆಗಾಗಿ ಹೋರಾಟ ಮಾಡುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಈ ನಿಟ್ಟಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಹಲ ವಾರು ಹೋರಾಟಗಳನ್ನು ಮಾಡುವ ಮೂಲಕ ರಾಜ್ಯದಲ್ಲಿ ಮನೆ ಮಾತಾಗಿದೆ ಎಂದರು.

ಕನ್ನಡ ನಾಮಫಲಕ ಹಾಕಬೇಕೆಂಬ ಸರ್ಕಾರದ ಆದೇಶವಿದ್ದರೂ ಸಹ ಕೆಲವರು ಉಲ್ಲಂಘಿಸಿದ್ದರು. ಅದನ್ನು ಪ್ರಶ್ನಿಸಿ ಹೋರಾಟ ಮಾಡಿದ ಕರವೇ ಕಾರ್ಯಕರ್ತರನ್ನು ಹಾಗೂ ರಾಜ್ಯಾಧ್ಯಕ್ಷರನ್ನು ಬಂಧಿಸಿರುವುದು ಕನ್ನಡಕ್ಕೆ ಕುತ್ತು ತಂದಂತೆ. ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ಕಸಾಪ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಮಾತನಾಡಿ, ಕನ್ನಡ ಭಾಷೆ ಉಳಿವಿಗಾಗಿ ಹೋರಾಟ ಮಾಡಿದವರನ್ನು ಜೈಲಿಗೆ ಕಳಿಸುವುದಾದರೆ, ಲೂಟಿ ಕೋರರಿಗೆ ಎಲ್ಲಿಗೆ ಕಳಿಸಬೇಕು? ಎಂದು ಪ್ರಶ್ನಿಸಿದರು.

ಕನ್ನಡ ನಾಡಿನಲ್ಲಿ ಕನ್ನಡದಲ್ಲಿ ನಾಮಫಲಕ ಹಾಕಿ ಎಂದು ಒತ್ತಾಯಿಸುವ ಪರಿಸ್ಥಿತಿ ಬಂದಿರುವುದು ದುರಂತವೇ ಸರಿ. ಕಾಟಾಚಾರದ ಕನ್ನಡಿಗರಿಗೆ ಮತ್ತು ಪರಭಾಷಿಗರಿಗೆ ಕರವೇ ತಕ್ಕ ಉತ್ತರ ನೀಡಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಕರವೇ ಹೋರಾಟ ನ್ಯಾಯಯುತವಾಗಿದೆ. ಕರವೇ ಗಟ್ಟಿತನದ ಹೋರಾಟಕ್ಕೆ ಸಾಕ್ಷಿಯಾಗಿ ಕಸಾಪ ನಿಂತಿದೆ ಎಂದು ಹೇಳಿದರು.

ಏಕತಾ ವೇದಿಕೆ ರಾಜ್ಯಾಧ್ಯಕ್ಷ ಹಾಲೇಶನಾಯ್ಕ, ಕಸಾಪ ಜಿಲ್ಲಾ ಕಾರ್ಯದರ್ಶಿ ದಿಳ್ಳೆಪ್ಪ, ಕರವೇ ಕಾನೂನು ಘಟಕದ ಅಧ್ಯಕ್ಷ ಎ.ಸಿ. ರಾಘವೇಂದ್ರ, ಬಸಮ್ಮ, ಮಂಜುಳಾ ಗಣೇಶ್, ಮಂಜುಳಾ ಮಹಾಂತೇಶ್, ಜಿಲ್ಲಾ ವಕೀಲರ ಸಂಘದ ಸಹ ಕಾರ್ಯದರ್ಶಿ ಮಂಜುನಾಥ್, ನೀಲಕಂಠರಾವ್, ರಾಘವೇಂದ್ರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಖಜಾಂಚಿ ಎನ್.ವಿ.ಬದರಿನಾಥ್, ಕಾರ್ಯದರ್ಶಿ ಜಿ.ಎಸ್. ವೀರೇಶ್, ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಎನ್.ಎಸ್. ರಾಜು, ರವಿಕುಮಾರ್, ಸಂತೋಷ್, ಓ. ಮಹೇಶ್ವರಪ್ಪ, ಗಿರೀಶ್ ಕುಮಾರ್, ಎಂ.ಡಿ. ರಫೀಕ್, ತಮನ್ನಾ, ಸುರೇಶ್, ತುಳಸಿರಾಮ್, ಮುಸ್ತಫಾ, ನಾಗರಾಜ್, ಅಕ್ಷಯ್, ಧೀರೇಂದ್ರ, ಅಲ್ಲಾಭಕ್ಷಿ, ವಾಸುದೇವ್ ರಾಯ್ಕರ್, ಕೋಡಿಹಳ್ಳಿ ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.

## ತುಳಜಾ ಭವಾನಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವ



ದಾವಣಗೆರೆ,ಜ.2- ಇಲ್ಲಿನ ಕೆಟಿಜೆ ನಗರದಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಇದೇ ದಿನಾಂಕ 5 ರ ಶುಕ್ರವಾರ ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ. ಭಕ್ತಾದಿಗಳು ಕಾರ್ತಿಕೋತ್ಸವದಲ್ಲಿ ಭಾಗವಹಿಸುವಂತೆ ದೇವಸ್ಥಾನ ಸಮಿತಿ ವಿನಂತಿಸಿದೆ.

## 'ನನ್ನ ಭಾರತ, ವಿಕಸಿತ ಭಾರತ' ಭಾಷಣ ಸ್ಪರ್ಧೆ

ದಾವಣಗೆರೆ, ಜ.2- ನೆಹರು ಯುವ ಕೇಂದ್ರದಿಂದ 'ನನ್ನ ಭಾರತ-ವಿಕಸಿತ್ ಭಾರತ - 2047' ವಿಷಯದ ಕುರಿತು ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಇದೇ ದಿನಾಂಕ 11 ರ ಗುರುವಾರ ನಗರದ ಬಿ.ಎಸ್.ಚನ್ನಬಸಪ್ಪ ಮಹಾ ವಿದ್ಯಾಲಯ ದಲ್ಲಿ ಏರ್ಪಡಿಸಲಾಗಿದೆ. ಇದೇ ದಿನಾಂಕ 10 ರೊಳಗೆ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ. ನಂ 9901863789 ಸಂಪರ್ಕಿಸಲು ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಭುಕ್ಯಾ ಸಂಜೀವ್ ತಿಳಿಸಿದ್ದಾರೆ.

## ನೂತನ ಅಪರಾಧ ಕಾಯ್ದೆಗಳಿಗೆ ಜ.26ರ ಒಳಗೆ ಅಧಿಸೂಚನೆ

ನವದೆಹಲಿ, ಜ. 2 – ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮಗಳಿಗೆ ಸಂಬಂಧಿಸಿದಂತೆ ಜನವರಿ 26ರ ಒಳಗೆ ಅಧಿಸೂಚನೆ ಹೊರಡಿಸಲಾಗುವುದು. ಈ ಕಾಯ್ದೆಗಳು ವರ್ಷದೊಳಗೆ ಜಾರಿಗೆ ಬರಲಿವೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ಚಳಿಗಾಲದ ಅಧಿವೇಶನದಲ್ಲಿ ಸಂಸತ್ತು ಮಸೂದೆಗಳನ್ನು ಅಂಗೀಕರಿಸಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಿಸೆಂಬರ್ 25ರಂದು ಮಸೂದೆಗಳಿಗೆ ಅನುಮತಿ ನೀಡಿದ್ದರು. ತ್ವರಿತವಾಗಿ ವಿಧಿ ವಿಜ್ಞಾನ ಸಾಕ್ಷಿಗಳನ್ನು ಸಂಗ್ರಹಿಸುವ ಸಲುವಾಗಿ 900 ವಿಧಿ ವಿಜ್ಞಾನ ವಾಹನಗಳನ್ನು ಖರೀದಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇವುಗಳನ್ನು ದೇಶದ ಎಲ್ಲಾ 850 ಪೊಲೀಸ್ ಜಿಲ್ಲೆಗಳಿಗೆ ರವಾನಿಸಲಾಗುವುದು. ಇದರಿಂದ ಅಪರಾಧ ನಡೆದ ಸ್ಥಳಗಳಲ್ಲಿ ತ್ವರಿತವಾಗಿ ಸಾಕ್ಷಿ ಸಂಗ್ರಹಿಸಲು ಸಾಧ್ಯವಾಗಲಿದೆ. ಕಾಯ್ದೆಗಳ ಅಧಿಸೂಚನೆ ಪ್ರಕಟವಾದ ನಂತರ, ಅವುಗಳ ಬಗ್ಗೆ ಪೊಲೀಸ್ ಅಧಿಕಾರಿಗಳು, ತನಿಖಾ ಅಧಿಕಾರಿಗಳು ಹಾಗೂ ವಿಧಿ ವಿಜ್ಞಾನ ವಲಯದ ಪರಿಣಿತರಿಗೆ ತರಬೇತಿ ಆರಂಭಿಸಲಾಗುವುದು.

ಈ ಕಾಯ್ದೆಗಳ ಬಗ್ಗೆ ತರಬೇತಿ ನೀಡಲು ವಿವಿಧ ವಲಯಗಳ 3 ಸಾವಿರ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗುವುದು. ಮುಂದಿನ ಒಂದು ವರ್ಷದಲ್ಲಿ ಸಂಬಂಧಿಸಿದ ಶೇ.90ರಷ್ಟು ಜನರಿಗೆ ತರಬೇತಿ ನೀಡಲಾಗುವುದು.

ನ್ಯಾಯಿಕ ಅಧಿಕಾರಿಗಳಿಗೆ ತರಬೇತಿ ನೀಡುವ ಕುರಿತು ಈಗಾಗಲೇ ಸಮಾಲೋಚನೆ ನಡೆಸಲಾಗಿದೆ. ಭೂಪಾಲದ ಅಕಾಡೆಮಿಯೊಂದರಲ್ಲಿ ತರಬೇತಿ ನೀಡಲಾಗುವುದು.

## ವಿಕಲಚೇತನರ ಬಸ್‌ಪಾಸ್‌ಗೆ ಹೊಸದಾಗಿ, ನವೀಕರಣಕ್ಕಾಗಿ ಅರ್ಜಿ

ದಾವಣಗೆರೆ, ಜ. 2 - ಪ್ರಸಕ್ತ ಸಾಲಿನ ವಿಕಲಚೇತನ ಫಲಾನುಭವಿಗಳು ರಿಯಾಯಿತಿ ದರದ ಬಸ್‌ಪಾಸ್ ಹೊಸದಾಗಿ, ನವೀಕರಣ ಮೂಲಕ ಪಡೆಯಲು ಆನ್‌ಲೈನ್‌ನ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಫಲಾನುಭವಿಗಳು ವಿಕಲಚೇತನರ ಪಾಸ್ ನವೀಕರಿಸಿಕೊಳ್ಳಲು ಸೇವಾಸಿಂಧು ಪೋರ್ಟ್‌ಲ್ https://serviceonline.gov.in/karnataka/ನಲ್ಲಿ ಘಟಕ ವ್ಯವಸ್ಥಾಪಕರ ಕೌಂಟರ್ (ಐಡಿ)ಗೆ ಮತ್ತು ಹೊಸ ಪಾಸ್‌ಗಳನ್ನು ಪಡೆಯಲು ವಿಭಾಗೀಯ ನಿಯಂತ್ರಣಾಧಿಕಾರಿಗಳು, ದಾವಣಗೆರೆ ವಿಭಾಗ ಕೌಂಟರ್(ಐಡಿ)ಗೆ ಅರ್ಜಿ ಸಲ್ಲಿಸಬಹುದು. ಡಿ.31 ವರೆಗೆ ಮಾನ್ಯತೆ ಇರುವ ವಿಕಲ ಚೇತನರ ಪಾಸ್‌ಗಳನ್ನು ಬರುವ ಫೆಬ್ರವರಿ 28ರವರೆಗೆ ಅವಧಿ ವಿಸ್ತರಣೆ ಮಾಡಲಾಗಿದೆ.

ಪಾಸ್ ನವೀಕರಣ ಮಾಡಿಸಿಕೊಳ್ಳಲು ಪಾಸ್ ವಿತರಣಾ ಕೇಂದ್ರ ಮತ್ತು ತಾಲ್ಲೂಕು ವಿವರ: 1.1.2024 ರಿಂದ 29.2.2024 ರವರೆಗೆ ದಾವಣಗೆರೆ, ಜಗಳೂರು, ಚನ್ನಗಿರಿ, ಫಲಾನುಭವಿಗಳಿಗೆ ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿರುವ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಮತ್ತು ಹರಿಹರ ಫಲಾನುಭವಿಗಳಿಗೆ ಹರಿಹರದ ಬಸ್ ನಿಲ್ದಾಣವನ್ನು ಸಂಪರ್ಕಿಸಲು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

# ಕನ್ನಡ ಪರ ಸಂಘಟನೆಗಳ ಒಕ್ಕೂಟದ ಪ್ರತಿಭಟನೆ



ದಾವಣಗೆರೆ, ಜ. 2- ಕನ್ನಡೇತರ ನಾಮಫಲಕ ತೆರವುಗೊಳಿಸುವಂತೆ ಹೋರಾಟ ಮಾಡುತ್ತಿದ್ದ ಕರವೇ ನಾರಾಯಣ ಗೌಡ ಮತ್ತವರ ತಂಡದವರನ್ನು ಬಂಧಿಸಿರುವುದನ್ನು ಖಂಡಿಸಿ, ಕನ್ನಡ ಪರ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಟಿ.ಶಿವಕುಮಾರ್ ನೇತೃತ್ವದಲ್ಲಿ ನಗರದ ಜಯದೇವ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಟಿ. ಶಿವಕುಮಾರ್ ಅವರು, ಬೆಂಗಳೂರಿನಲ್ಲಿ ಕನ್ನಡೇತರ ನಾಮಫಲಕ ತೆರವು ಹೋರಾಟ ಮಾಡುತ್ತಿದ್ದ ಕನ್ನಡ ಪರ ಹೋರಾಟ ಗಾರರನ್ನು ಪೊಲೀಸರು ಬಂಧಿಸಿ, ಹಲವು ಸೆಕ್ಷನ್ ಅಡಿ ಕೇಸ್ ದಾಖಲಿಸಿರುವುದು ಕನ್ನಡ ಪರ ಹೋರಾಟವನ್ನು ಹತ್ತಿಕ್ಕುವ ಹುನ್ನಾರ ಎಂದು ಕಿಡಿಕಾರಿದರು.

ಹೋರಾಟಗಾರರ ಮೇಲೆ ಕೇಸು ಹಾಕಬಹುದೇ ಹೊರತು, ಕನ್ನಡ ನಾಡು, ನುಡಿ, ನೆಲ, ಜಲ, ಜನಪರ ಹೋರಾಟವನ್ನಾಗಲೀ, ಧ್ವನಿಯನ್ನಾಗಲೀ ಹತ್ತಿಕ್ಕಲು ಸಾಧ್ಯವಿಲ್ಲ ಎಂದರು.

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಪರಭಾಷೆಯ ನಾಮಫಲಕಗಳ ದಬ್ಬಾಳಿಕೆಯಲ್ಲಿ ಈ ನೆಲದ ಭಾಷೆಯ ನಾಮಫಲಕ ಹಾಕಿಕೊಳ್ಳುವಂತೆ ಹೋರಾಟ ನಡೆಸಿದ್ದ ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಮತ್ತಿತರರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವ ಮೂಲಕ ಪೊಲೀಸ್ ಇಲಾಖೆ, ರಾಜ್ಯ ಸರ್ಕಾರವು ಕನ್ನಡ ಭಾಷೆಗೆ, ಕನ್ನಡಿಗರಿಗೆ ಅವಮಾನಿಸಿದೆ ಎಂದು ಹೇಳಿದರು.

ಕನ್ನಡ ಪರ ಹೋರಾಟಗಾರರನ್ನು ಜೈಲಿನಲ್ಲಿ ಕೈದಿಗಳಂತೆ ಬಂಧಿಸಿಟ್ಟಿರುವುದು ಅಕ್ಷಮ್ಯ. ಪರಭಾಷಿಗರ ಚಿತಾವಣೆ, ಪ್ರಭಾವಕ್ಕೆ ಮಣಿದಿರುವ ರಾಜ್ಯ ಸರ್ಕಾರ, ಗೃಹ ಸಚಿವರು, ಪೊಲೀಸ್ ಇಲಾಖೆ ಕನ್ನಡ ಪರ ಹೋರಾಟಗಾರರನ್ನು ಅಪರಾಧಿಗಳಂತೆ ಬಿಂಬಿಸಲು ಮುಂದಾಗಿರುವುದು ದೌರ್ಭಾಗ್ಯವೇ ಸರಿ ಎಂದರು.

ಕೂಡಲೇ ಬೇಸರತ್ ಮೇಲೆ ಬಿಡುಗಡೆ ಮಾಡಬೇಕು. ಎಲ್ಲಾ ಕೇಸುಗಳನ್ನು ವಾಪಾಸ್ ಪಡೆಯಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕನ್ನಡ ಪರ ಹೋರಾಟಗಾರರಾದ ಬಸವರಾಜ ಐರಣಿ, ನಾಗೇಂದ್ರ ಬಂಡೀಕರ್, ಕೆ.ಜಿ. ಶಿವಕುಮಾರ್, ಎಸ್.ಜಿ. ಸೋಮಶೇಖರ್, ಕೆ.ಎನ್. ವೆಂಕಟೇಶ್, ಮಂಜುನಾಥ ಗೌಡ, ನಾಗರಾಜ್ ಆದಾಪುರ, ಶುಭಮಂಗಳ, ಎಸ್. ಸುವರ್ಣಮ್ಮ, ಸುನೀತಾ ಭೀಮಣ್ಣ, ರಾಧಾಬಾಯಿ, ಸಂಗಮ್ಮ, ಸುಧಾ, ಸುನಂದ ವರ್ಣೇಕರ್, ಶಾಮ್ ಕುಶಾಲ್ ಮತ್ತಿತರರಿದ್ದರು.

# ಶಾಸ್ತ್ರೀಯ ನೃತ್ಯ, ಸಂಗೀತಗಳು ಮನರಂಜನೆಗಲ್ಲ,ಆತ್ಮ ನಿವೇದನೆಗೆ

## ಅಮೆರಿಕದ ಅದಿತಿಯ ಅದ್ವಿತೀಯ ನೃತ್ಯ ಪ್ರಸ್ತುತಿಯಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಎಂ







ದಾವಣಗೆರೆ, ಜ.2- ಭಾರತೀಯ ಶಾಸ್ತ್ರೀಯ ನೃತ್ಯ, ಸಂಗೀತಗಳು ಮನೆರಂಜನೆ ಗಾಗಿ ಅಲ್ಲ. ಆತ್ಮ ನಿವೇದನೆಗೆ ಹಾಗೂ ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನ ಎಂಬ ಭಾವನೆ ಇರುವುದರಿಂದಲೇ ವಿಶ್ವದಾದ್ಯಂತ ಇದಕ್ಕೆ ಗೌರವ ಹಾಗೂ ಪೂಜ್ಯ ಭಾವನೆ ಉಂಟು ಎಂದು ಹಿರಿಯ ಪತ್ರಕರ್ತ ಹೆಚ್. ಬಿ.ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ದಾವಣಗೆರೆ ಹರಿಹರ ಅರ್ಬನ್ ಬ್ಯಾಂಕ್, ಕಲಾಪ್ರಕಾಶ ವೃಂದ ಸಮುದಾಯ ಭವನದಲ್ಲಿ ಇಂದು ಏರ್ಪಾಡಾಗಿದ್ದ ಭಾರತೀಯ ಮೂಲದ ಅಮೆರಿಕ ನಿವಾಸಿ ಕುಮಾರಿ ಆದಿತಿ ಆಚಾರ್ಯ ಅವರ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಋಗ್ವೇದದಿಂದ ಸ್ವರವನ್ನು ಯಜುರ್ವೇದದಿಂದ ಶಬ್ದವನ್ನು ಸಾಮವೇದದಿಂದ ಸಂಗೀತವನ್ನು ಅಥರ್ವವೇದದಿಂದ ರಸಗಳನ್ನು ತೆಗೆದುಕೊಂಡು ಬ್ರಹ್ಮ ಭರತನಾಟ್ಯವನ್ನು ಪಂಚಮವೇದವಾಗಿ ಸೃಷ್ಟಿಸಿ ಭರತಮುನಿಗೆ ಕೊಟ್ಟನೆಂದೂ, ಭರತಮುನಿಯಿಂದಾಗಿ ಭೂಮಿಗೆ ಇದು ಬಂದಿದೆ ಎಂದು ಹೇಳಲಾಗುತ್ತಿದ್ದು, ಇಂತಹ ಪವಿತ್ರವಾದ ಭಾರತೀಯ ಶಾಸ್ತ್ರೀಯ ನೃತ್ಯ ಪರಂಪರೆಯು ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನ ಎಂದರು.

ಭಾರತೀಯ ಸಂಜಾತೆಯಾಗಿ ಪ್ರಸ್ತುತ ಅಮೆರಿಕ ನಿವಾಸಿಯಾಗಿರುವ ಕಲಾವಿದೆ, ವಿದುಷಿ ಆಶಾ ಶ್ರೀನಿವಾಸ ಆಚಾರ್ಯ ಅವರ ಸುಪುತ್ರಿ ಅದಿತಿ ತಾಯಿಯಿಂದಲೂ ಹಾಗೂ ಅನೇಕ ಪ್ರಸಿದ್ಧ ಗುರುಗಳಿಂದಲೂ ನೃತ್ಯಾಭ್ಯಾಸ ಮಾಡಿದ್ದಾರೆ. ಅಮೆರಿಕದಲ್ಲೇ ರಂಗ ಪ್ರವೇಶವನ್ನೂ ಸಹ ಮಾಡಿದ್ದು, ಇಂದು ತನ್ನ ತಾಯಿಯ ತವರೂರಾದ ದಾವಣಗೆರೆಯಲ್ಲಿ ಸುಮಾರು ಎರಡೂವರೆ ತಾಸುಗಳಿಗೂ ಹೆಚ್ಚು ಕಾಲ ಅಮೋಘ ನೃತ್ಯ ಪ್ರದರ್ಶನ ನೀಡಿದರು.

'ನಮ್ಮಮ್ಮ ಶಾರದೆ ಉಮಾಮಹೇಶ್ವರಿ' ಕೃತಿಯಿಂದ ಆರಂಭ ಮಾಡಿ, ನಂತರ ಪ್ರಸಿದ್ಧ ನೃತ್ಯ ಶಿಕ್ಷಕಿಯರಾದ ವಸುಂಧರಾ ದೊರೆಸ್ವಾಮಿ ಅವರ ಸಂಯೋಜನೆಯ 'ಮಹಾದೇವ ಶಿವ ಶಂಭೋ' ನಟರಾಜ ಕೌಸ್ತುಭಂ ನೃತ್ಯ ಪ್ರಸ್ತುತಿಯನ್ನು ಚಿಟ್ಟೆಸ್ವರದಲ್ಲಿ ಅಭಿನಯಿಸುವಾಗ ಗಂಗಾವತರಣದಲ್ಲಿ ಶಿವನ ರೌದ್ರ ಹಾಗೂ ಗಂಗೆಯ ಲಾಸ್ಯ ಅಂತ್ಯದಲ್ಲಿ ಶಿವನ ಶಾಂತ ಸ್ಥಿತಿ ಇವುಗಳನ್ನು ಮನೋಜ್ಞವಾಗಿ ಅಭಿನಯಿಸಿದಳು.

ಮೂರನೆಯ ಪ್ರಸ್ತುತಿಯಾಗಿ ಮುತ್ತಯ್ಯ ಭಾಗವತರ ಶುದ್ಧ ಧನ್ಯಾಸಿ ರಾಗದ 'ಹಿಮಗಿರಿ ತನಯೇ ಹೇಮಲತೆ' ಇದರ ನೃತ್ಯ ಪರಿಸ್ಥಿತಿಯಲ್ಲಿ ದೇವಿಯು ಮಹಿಷಾಸುರ ಸಂಹಾರ ಮಾಡುವ ಸನ್ನಿವೇಶವನ್ನು ಬೀಭತ್ಸ ವೀರ ರಸಗಳಲ್ಲಿ ಬಿಂಬಿಸಿದಳು. ನಂತರದ ಪ್ರಸ್ತುತಿಯಾಗಿ ಸಾಹಿತ್ಯವಿಲ್ಲದ ಕೇವಲ ಚಾರಿಗಳಲ್ಲಿ ಮಿಶ್ರಗತಿಯ 'ತನಿ ಆವರ್ತ'ವು ಸುಮಾರು 20 ನಿಮಿಷಗಳ ಕಾಲ ಶಿವ ಪಾರ್ವತಿಯರ ನೃತ್ಯದ ರೂಪದಲ್ಲಿ ಅತ್ಯಂತ ಚುರುಕಿನಚಲನೆಗಳಲ್ಲಿಕಣ್ಮನರಂಜಿಸಿದ್ದಲ್ಲದೇ ಅದಿತಿ ಸಾಧನೆಯನ್ನು ಸಾಕ್ಷೀಕರಿಸಿತು.

ಪುರಂದರ ದಾಸರ 'ನಾನೇನ ಮಾಡಿದೆನೋ ರಂಗ' ಎನ್ನುವ ಕೀರ್ತನೆಯ ನೃತ್ಯ ಪ್ರಸ್ತುತಿಯಲ್ಲಿ ಹಿರಣ್ಯ ಕಶ್ಯಪುವಿನ ವಧೆ, ಗಜೇಂದ್ರ ಮೋಕ್ಷ ಹಾಗೂ ದ್ರೌಪದಿಯ ಅಕ್ಷಯಾಂಬರ ಸನ್ನಿವೇಶಗಳ ನೃತ್ಯದಲ್ಲಿ ವೀರ ರೌದ್ರ, ಬೀಭತ್ಸ ಕರುಣಾ ಹಾಗೂ ಶಾಂತ ರಸಗಳು ಅನುಪಮವಾಗಿ ಮೂಡಿಬಂದವು. ಇದು ನಾರಾಯಣನ ದಶಾವತಾರದ ಅಂಗೀಕ ಅಭಿನಯ ದೊಂದಿಗೆ ಮುಂದುವರೆದು ಪವಮಾನ ಸ್ತುತಿಯೊಂದಿಗೆ ಮುಕ್ತಾಯವಾಯಿತು.

ವಿದುಷಿ ಆಶಾ ಶ್ರೀನಿವಾಸ ಆಚಾರ್ಯರ ಪುತ್ರ ಅಭಿರಾಮ 'ಕುಂದ ಗಣಪತಿ ನಮೋ' ನೃತ್ಯವನ್ನು ಕಲಾಕ್ಷೇತ್ರ ಶೈಲಿಯಲ್ಲೂ, ಪುರಂದರ ದಾಸರ ಕೀರ್ತನೆ 'ಗುಮ್ಮನ ಕರೆಯದಿರೆ' ಹಾಗೂ ಕಮಾಚ್ ರಾಗದಲ್ಲಿ 'ಜಯ ಭಾರತ ಮಾತಾ' ನೃತ್ಯವನ್ನು ಆಕರ್ಷಕವಾಗಿ ಪ್ರಸ್ತುತಪಡಿಸಿನು. ತದನಂತರದಲ್ಲಿ ನೆದರ್‌ಲ್ಯಾಂಡ್ ನಿವಾಸಿ ಉಷಾ ಮಧುಕಮಾರ್ ಹಾಗೂ ಅಮೆರಿಕ ನಿವಾಸಿ ಆಶಾ ಶ್ರೀನಿವಾಸ ಆಚಾರ್ಯ ಸಹೋದರಿಯರು 'ಆತ್ಮಾ ರಾಮ ಆನಂದರಾಮ', 'ಭೋ ಶಂಭೋ ಶಿವ ಶಂಭೋ ಸ್ವಯಂಭೋ' ಹಾಗೂ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಕೃತಿಗಳನ್ನು ಸಂಯೋಜಿಸಿದ ನೃತ್ಯವನ್ನು ಲೀಲಾಜಾಲವಾಗಿ ಅಷ್ಟೇ ಮನೋಜ್ಞವಾಗಿ ಪ್ರಸ್ತುತಪಡಿಸಿದರು.

ದೀಪಾ ರಾಮಕುಮಾರ್ ಅಡಿಗ ಸ್ಕಂದ ಸಮನ್ಯು ಮತ್ತು ಪುಟಾಣಿ ಇಂಚರ ಶಾರ್ವರಿ ಕನ್ನಡ ಗೀತೆಗಳ ನೃತ್ಯ ಮಾಡಿದರು. ಶ್ರೀಮತಿ ಶ್ರೀಮತಿ ಚಂದ್ರಶೇಖರ ಅಡಿಗರು ಧನ್ಯವಾದ ಸಮರ್ಪಿಸಿದರು.

ಜಿಲ್ಲಾ ಬ್ರಾಹ್ಮಣ ಸಮಾಜದ ಡಾ. ಬಿ.ಟಿ. ಅಚ್ಯುತ್, ಸಾಲಿಗ್ರಾಮ ಗಣೇಶ್ ಶಣೈ ಮುಂತಾದವರು ಶುಭ ಹಾರೈಸಿದರು.


**Aatery / ಈಟರಿ ಆ್ಯಪ್**




ದಾವಣಗೆರೆ ನಗರದಲ್ಲಿ ಪ್ರಥಮವಾಗಿ ಪರಿಚಯಿಸುತ್ತಿರುವ
**Aatery / ಈಟರಿ ಆ್ಯಪ್**
ಪ್ಲೇ ಸ್ಟೋರ್‌ನಲ್ಲಿ ಡೌನಲೋಡ್ ಮಾಡಿ ನಿಮ್ಮ ಮನೆಯ ಬಾಗಿಲಿಗೆ ಡೆಲಿವರಿ ಪಡೆಯಿರಿ.
ಕೇವಲ 1 ಗಂಟೆಯ ಒಳಗೆ ಚಿಕನ್, ತರಕಾರಿ, ಹಣ್ಣು ಹಂಪಲು ಮತ್ತು ಕಿರಾಣಿ ಸಾಮಾನುಗಳು.
ಸಮಯ : ಬೆಳಿಗ್ಗೆ 11 AM to ಸಂಜೆ : 8 PM


**ಮಾನ್ಯ ಗೌರವಾನ್ವಿತ ಸಿವಿಲ್ 3ನೇ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ದಾವಣಗೆರೆ**

ಸಿ.ಆರ್.ಮಿಸ್-1380/2023

ಅರ್ಜಿದಾರರು : ಮಂಜುನಾಥ ಪಿ. ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ಮಹಾನಗರ ಪಾಲಿಕೆ, ದಾವಣಗೆರೆ.

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟಿಸ್**

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ಶ್ರೀ ಪರಶುರಾಮಪ್ಪ ಬಿನ್ ಹನುಮಂತಪ್ಪ ಇವರು ದಿನಾಂಕ 28.05.2011ರಂದು ವಿಳಾಸ 654/52 ಮೌನೇಶ್ವರ ಬಡಾವಣೆ, ಲೆನಿನ್ ನಗರ, ದಾವಣಗೆರೆಯಲ್ಲಿ ಮರಣ ಹೊಂದಿದ್ದು, ಅರ್ಜಿದಾರರು ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ಸನ್ನಿಧಾನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ 09.02.2024ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೆಗದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ, ದಿನಾಂಕ 27.12.2023ರಂದು ಕೊಡಲ್ಪಟ್ಟಿದೆ.

**ನಿಜಾಮುದ್ದೀನ್**
ಅರ್ಜಿದಾರರ ಪರ ವಕೀಲರು
ಸ್ಥಳ: ದಾವಣಗೆರೆ
ದಿನಾಂಕ : 22.12.2023

ನ್ಯಾಯಾಲಯದ ಆದೇಶ ಮೇರೆಗೆ
**ಶಿರಸ್ತೇದಾರರು**
3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.


**ಜನ್ಮದಿನದ ಶುಭಾಶಯಗಳು**



ತಮ್ಮ ಜನ್ಮದಿನದ ಸಂಭ್ರಮದಲ್ಲಿರುವ ಹಿರಿಯ ರಿಯಲ್ ಎಸ್ಟೇಟ್ ಉದ್ಯಮಿಗಳಾದ
**ಶ್ರೀ ಸುರೇಶ್ ಕಟ್ಟಿಮನಿ**
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು :
✦ ಜಿ.ಎನ್. ಸುರೇಂದ್ರ ಗುಜ್ಜರ್, ಕಕ್ಕರಗೊಳ್ಳ
✦ ಜಿ.ಎನ್. ನರೇಂದ್ರ ಗುಜ್ಜರ್, ಪತ್ರಿಕಾ ವಿತರಕರು
✦ ಮಾಲತೇಶ್ ಎನ್. ಗುಜ್ಜರ್
ವಾಣಿ ಫ್ಯಾನ್ಸಿ ಅಂಡ್ ಬುಕ್ಸ್ (ಗುಜ್ಜರ್ ಫ್ಯಾನ್ಸಿ ಸ್ಟೋರ್)
ಹಳೇ ಬೇತೂರು ರಸ್ತೆ, ದಾವಣಗೆರೆ.

DHUSBN
THE DAVANGERE-HARIHARA URBAN SAHAKARA BANK NIYAMITHA

# ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ

50 DHUSBN CELEBRATING ANNIVERSARY 1973-2022

ಆಡಳಿತ ಕಛೇರಿ : ನಂ. 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ - 2. ಫೋ. : 272570, 272561



ಲಿಂ. ವೇ. ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ
ಸಂಸ್ಥಾಪಕರು

**ನಮ್ಮ ಬ್ಯಾಂಕಿನ ನೂತನ 9ನೇ ಶಾಖೆಯನ್ನು ದಾವಣಗೆರೆ ನಗರದ ಸರಸ್ವತಿ ಬಡಾವಣೆಯಲ್ಲಿ ದಿನಾಂಕ 03-01-2024ರ ಬುಧವಾರ ಪ್ರಾರಂಭಿಸುತ್ತಿದ್ದೇವೆ. ಮಾನ್ಯ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಬ್ಯಾಂಕಿಂಗ್ ವ್ಯವಹಾರವನ್ನು ನಮ್ಮ ಬ್ಯಾಂಕಿನಲ್ಲಿ ಮಾಡಬೇಕಾಗಿ ವಿನಂತಿ.**




**ಸ್ಥಳ : # 789/15-110, ಮೊದಲನೇ ಮಹಡಿ, ಎಸ್.ಎಸ್.**





## ನೂತನ ಶಾಖೆಯ ಉದ್ಘಾಟನೆ :

**ಸನ್ಮಾನ್ಯ ಡಾ. ಜಿ.ಎಂ. ಸಿದ್ದೇಶ್ವರರವರು**
ಮಾನ್ಯ ಮಾಜಿ ಕೇಂದ್ರ ಸಚಿವರು ಹಾಗೂ ಹಾಲಿ ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ.

**ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪರವರು**
ಮಾಜಿ ಸಚಿವರು ಹಾಗೂ ಹಾಲಿ ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ.

## ಭದ್ರತಾ ಕೊಠಡಿ ಉದ್ಘಾಟನೆ :

**ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್‌ರವರು**
ಮಾಜಿ ಸಚಿವರು, ದಾವಣಗೆರೆ.

**ಸನ್ಮಾನ್ಯ ಶ್ರೀ ಎ.ಹೆಚ್. ಶಿವಯೋಗಿಸ್ವಾಮಿಯವರು**
ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕರು, ದಾವಣಗೆರೆ.

## ಎ.ಟಿ.ಎಂ. ಉದ್ಘಾಟನೆ :

**ಸನ್ಮಾನ್ಯ ಶ್ರೀ ಬಿ.ಪಿ. ಹರೀಶ್‌ರವರು**
ಶಾಸಕರು, ಹರಿಹರ ವಿಧಾನಸಭಾ ಕ್ಷೇತ್ರ.

## ವಿಶೇಷ ಆಹ್ವಾನಿತರು :

**ಸನ್ಮಾನ್ಯ ಶ್ರೀಮತಿ ಹೆಚ್. ಅನ್ನಪೂರ್ಣರವರು**
ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ.

**ಸನ್ಮಾನ್ಯ ಶ್ರೀಮತಿ ಎಸ್. ಮಂಜುಳಾರವರು**
ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ.

**ಸನ್ಮಾನ್ಯ ಶ್ರೀ ಬಿ.ಸಿ. ಉಮಾಪತಿಯವರು**
ಜವಳಿ ವರ್ತಕರು, ನಿರ್ದೇಶಕರು, ಡಿ.ಯು.ಸಿ. ಬ್ಯಾಂಕ್, ದಾವಣಗೆರೆ

**ಸನ್ಮಾನ್ಯ ಶ್ರೀ ಅಥಣಿ ವೀರಣ್ಣನವರು**
ಉದ್ಯಮಿಗಳು, ಹಿರಿಯ ಲೆಕ್ಕ ಪರಿಶೋಧಕರು

**ಸನ್ಮಾನ್ಯ ಶ್ರೀ ಕೋಗುಂಡಿ ಬಕ್ಕೇಶಪ್ಪನವರು**
ಅಧ್ಯಕ್ಷರು, ಡಿ.ಯು.ಸಿ. ಬ್ಯಾಂಕ್, ದಾವಣಗೆರೆ

**ಸನ್ಮಾನ್ಯ ಶ್ರೀ ದೇವರಮನಿ ಶಿವಕುಮಾರ್‌ರವರು**
ನಿರ್ದೇಶಕರು, ಡಿ.ಯು.ಸಿ. ಬ್ಯಾಂಕ್, ದಾವಣಗೆರೆ

**ಸನ್ಮಾನ್ಯ ಶ್ರೀ ಕೆ.ಎಂ. ವೀರೇಶ್‌ರವರು**
ಸದಸ್ಯರು ಮಹಾನಗರ ಪಾಲಿಕೆ, ದಾವಣಗೆರೆ.

**ಸನ್ಮಾನ್ಯ ಶ್ರೀಮತಿ ಉಮಾ ಪ್ರಕಾಶ್‌ರವರು**
ಸದಸ್ಯರು ಮಹಾನಗರ ಪಾಲಿಕೆ, ದಾವಣಗೆರೆ.

## ತಮ್ಮೆಗೆಲ್ಲರಿಗೂ ಆದರದ ಸ್ವಾಗತ ಬಯಸುವವರು :

### ಆಡಳಿತ ಮಂಡಳಿ ಸದಸ್ಯರುಗಳು :



ಶ್ರೀ ಎನ್.ಎ. ಮುರುಗೇಶ್
ಅಧ್ಯಕ್ಷರು



ಶ್ರೀ ಕಿರುವಾಡಿ ವಿ. ಸೋಮಶೇಖರ್ – ನಿರ್ದೇಶಕರು
ಶ್ರೀ ಎ.ಹೆಚ್. ಕುಬೇರಪ್ಪ – ನಿರ್ದೇಶಕರು
ಶ್ರೀ ಶಂಕರ್‌ರಾವ್ ಖಟಾವ್‌ಕರ್ – ನಿರ್ದೇಶಕರು
ಶ್ರೀ ಎಸ್.ಕೆ. ಪ್ರಭು ಪ್ರಸಾದ್ – ನಿರ್ದೇಶಕರು
ಶ್ರೀ ಕೆ.ಎಂ. ಜ್ಯೋತಿ ಪ್ರಕಾಶ್ – ನಿರ್ದೇಶಕರು
ಶ್ರೀ ಚಿದಾನಂದಪ್ಪ ಬಿ. – ನಿರ್ದೇಶಕರು



ಶ್ರೀ ವೆಂಕಪ್ಪ ಪಿ.ಹೆಚ್. – ನಿರ್ದೇಶಕರು
ಶ್ರೀ ನಾಗೇಂದ್ರಚಾರಿ ಬಿ. – ನಿರ್ದೇಶಕರು
ಶ್ರೀ ಕೊಟ್ರೇಶ್ ಎ. – ನಿರ್ದೇಶಕರು
ಶ್ರೀಮತಿ ಉಮಾ ವಾಗೀಶ್ – ನಿರ್ದೇಶಕರು
ಶ್ರೀ ವಿಶಾಲ್ ಆರ್. ಸಂಘುವಿ – ನಿರ್ದೇಶಕರು
ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್ – ನಿರ್ದೇಶಕರು
ಶ್ರೀಮತಿ ಅನುಪಾ ಡಾ|| ವೀರೇಂದ್ರಸ್ವಾಮಿ – ನಿರ್ದೇಶಕರು



ಶ್ರೀಮತಿ ಜಯಮ್ಮ ಪರಶುರಾಮಪ್ಪ
ಉಪಾಧ್ಯಕ್ಷರು



ಶ್ರೀ ಎ.ಹೆಚ್. ಕುಬೇರಪ್ಪ – ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು
ಶ್ರೀ ಕಿರುವಾಡಿ ವಿ. ಸೋಮಶೇಖರ್ – ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಕೆ.ಎಂ. ಬಸವರಾಜ್ – ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀಮತಿ ಜಿ.ಸಿ. ವಸುಂಧರ – ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ – ವ್ಯವಸ್ಥಾಪನಾ ಮಂಡಳಿ ಸದಸ್ಯರು



ಶ್ರೀ ಆರ್.ವಿ. ಸಿರಸಾಲಿಮಠ್ – ವೃತ್ತಿಪರ ನಿರ್ದೇಶಕರು
ಶ್ರೀ ಕಿರಣ್ ಆರ್. ಶೆಟ್ಟಿ – ವೃತ್ತಿಪರ ನಿರ್ದೇಶಕರು



ಶ್ರೀ ಎನ್. ತುಳಸಿನಾಥ್
ಪ್ರಧಾನ ವ್ಯವಸ್ಥಾಪಕರು

## ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು